ಶ್ರೀ ರಾಮಚಂದ್ರ ಮಿಷನ್®

ಜನವರಿ 2010 ಸಂಪುಟ 3 ಸಂಚಿಕೆ 1

India ECHOES
ONE WORLD ONE HUMANITY

ಆಂತರಿಕ ಪ್ರಸಾರಕ್ಕಾಗಿ ಮಾತ್ರ

ನಮ್ಮ ಓದುಗರೆಲ್ಲರಿಗೂ ಪ್ರಗತಿಶೀಲ ಹೊಸವರ್ಷವನ್ನು ನಾವು ಹಾರೈಸುತ್ತೇವೆ. ಪ್ರಪಂಚದಾದ್ಯಂತ ಎಲ್ಲಾ ಎಖೋ ವಾರ್ತಾಪತ್ರಗಳಿಗೂ ಒಂದು ಹೊಸ ರೂಪವನ್ನು ನೀಡಲಾಗಿದೆ.

ಈ ಸಂಚಿಕೆಯ ಪರಿವಿಡಿ

ಗುರುಗಳ ಪ್ರವಾಸ . . . . . . . . . . . . . . . . . . . . ಪುಟ 1–4
ಪ್ರಕಟನೆಗಳು . . . . . . . . . . . . . . . . . . . . . . ಪುಟ 5
ವಲಯ ಕಾರ್ಯ ಚಟುವಟಿಕೆಗಳು . . . . . . . . . . . . . . ಪುಟ 6–10
ಜ್ಯೋತಿ ಕೇಂದ್ರ . . . . . . . . . . . . . . . . . . . . ಪುಟ 11







## ಗುರುಗಳ ಪ್ರವಾಸ

ತುರೈಯಾರ್ ಎಂಬುದು ದಕ್ಷಿಣ ತಮಿಳುನಾಡುವಿನಲ್ಲಿ ತಿರುಚಿಯಿಂದ 45 ಕಿ.ಮೀ. ದೂರದಲ್ಲಿರುವ ಒಂದು ಚಿಕ್ಕ ಊರು. ಅದು 2001ರಲ್ಲಿ ಇದ್ದ ಇಬ್ಬರು ಅಭ್ಯಾಸಿಗಳಿಂದ ಈಗ 150 ಅಭ್ಯಾಸಿಗಳಿಗೆ ಅತಿಶೀಘ್ರವಾಗಿ ಬೆಳೆದಿರುವುದನ್ನು ಕಾಣುತ್ತಿದ್ದೇವೆ. ಈ ಬೆಳವಣಿಗೆಯಿಂದ ಒಂದು ಆಶ್ರಮದ ಅಗತ್ಯತೆಯ ಅನುಭವ ಉಂಟಾಗಿ ಒಂದು ಎಕರೆ ಜಾಗವನ್ನು ಖರೀದಿಸಲಾಗಿದೆ.

ಅಕ್ಟೋಬರ್ 25ರಂದು ಈ ಕೇಂದ್ರಕ್ಕೆ ನೀಡಿದ ಗುರುಗಳ ಪ್ರಥಮ ಭೇಟಿಯಿಂದಾಗಿ ಅಲ್ಲಿನ ಅಭ್ಯಾಸಿಗಳು ದಿವ್ಯಾನಂದದ ವಾತಾವರಣವನ್ನು ಅನುಭವಿಸಿದರು. ಅವರು ಸುಮಾರು 850 ಅಭ್ಯಾಸಿಗಳಿಗೆ ಸತ್ಸಂಗ ನಡೆಸಿ ಕೊಟ್ಟರಲ್ಲದೆ ತಮಿಳಿನಲ್ಲಿ ಅವಶ್ಯಕತೆಯನ್ನು ಮತ್ತು ಆಂತರಿಕ ಬದಲಾವಣೆಯನ್ನು ತಂದುಕೊಂಡು ನಮ್ಮ ಬಾಹ್ಯಕಾರ್ಯಗಳಲ್ಲಿ ಅದರ ಸಾಮ್ಯ ಬದಲಾವಣೆಗಳನ್ನುಂಟು ಮಾಡಿಕೊಳ್ಳಬೇಕೆಂದು ಒತ್ತಾಯಿಸಿದರು. ಇದು, ಇತರರನ್ನು ಸಂಸ್ಥೆಯತ್ತ ಆಕರ್ಷಿಸುವುದೆಂದೂ ಅವರು ಹೇಳಿದರು.

ಇನ್ನೂ ಕಟ್ಟಡ ನಿರ್ಮಾಣ ಪ್ರಾರಂಭದ ಮೊದಲೇ, ಗುರುಗಳು ಭವಿಷ್ಯದಲ್ಲಿ ಆಶ್ರಮದ ಸಂಭವನೀಯ ವಿಸ್ತರಣದ ಬಗ್ಗೆ ಚರ್ಚೆ ನಡೆಸಿದರು! ನಮ್ಮ ದೃಷ್ಟಿಯು ಇನ್ನೂ ವರ್ತಮಾನದಲ್ಲಿ ಸೀಮಿತವಾಗಿರುವಾಗಲೇ, ಗುರುಗಳು ಇನ್ನೂ ವರ್ತಮಾನದಲ್ಲಿ ಭವಿಷ್ಯತ್ತಿನ ತಳಪಾಯ ಹಾಕುತ್ತಿರುವಾಗಲೇ ಅವರ ನೋಟ ಭವಿಷ್ಯತ್ತಿನಲ್ಲಿ ಬಹಳ ದೂರದಲ್ಲಿ ಅರಳಿತ್ತೆಂಬುದು ಸ್ಪಷ್ಟವಾಗುತ್ತಿತ್ತು.

### ಸಿಲಿಗುರಿ ಮತ್ತು ಗಾಂಗ್‌ಟಕ್

ನವಂಬರ್ 2ರಂದು ಗುರುಗಳು ಕೊಲ್ಕತದಿಂದ ಬಗ್‌ಡೊಗ್ರಾಗೆ ವಿಮಾನದಲ್ಲಿ ಪಯಣಿಸಿದರು. ಅಲ್ಲಿ ಅಭ್ಯಾಸಿಗಳ ದೊಡ್ಡ ಗುಂಪು ಅವರನ್ನು ಪ್ರೀತಿಯಿಂದ ಸ್ವಾಗತಿಸಿದರು. ವಿಮಾನ ನಿಲ್ದಾಣದಿಂದ ಒಂದು ಗಂಟೆ ಪ್ರಯಾಣದ ದೂರವಿರುವ, ಹಾಗೂ ಹೊಸದಾಗಿ ಖರೀದಿಸಿರುವ ಸಂಸ್ಥೆಯ ಭೂಸ್ವತ್ತಿನ ಕಡೆಗೆ ಹೊರಟರು. ನಂತರ ಸಿಲಿಗಿರಿಯಲ್ಲಿನ ಒಂದು ಹೋಟೆಲಿನ ಸಮ್ಮೇಳನ ಕೊಠಡಿಯಲ್ಲಿ ಸಂಜೆ 5.30ಕ್ಕೆ ಸತ್ಸಂಗ ನಡೆಸಿದರು.

ಮಾರನೆಯ ಬೆಳಿಗ್ಗೆ ಸತ್ಸಂಗದ ಸಮಯವನ್ನು ಏಳುಗಂಟೆಗೆ ನಿಗದಿಪಡಿಸಲಾಗಿತ್ತು. ಆದರೆ ಧ್ಯಾನ ಮಂದಿರದಲ್ಲಿ ಗುರುಗಳು ಬೆಳಿಗ್ಗೆ 6.30 ಕ್ಕೇ ಉಪಸ್ಥಿತರಿದ್ದರು. ಅಭ್ಯಾಸಿಗಳು ಬಂದು ಸೇರುವುದನ್ನು ಕಾಯುತ್ತಿದ್ದರು. ನಂತರ ಅವರು ಸಿಲಿಗುರಿಯಿಂದ ಬೆಳಿಗ್ಗೆ 9 ಗಂಟೆಗೆ ಟೀಸ್ಟ ನದಿಯ ದಂಡೆಯ ಮೂಲಕ ಇರುವ ಬಹು ರಮಣೀಯವಾದ ಮಾರ್ಗದ ಮೂಲಕ ಗಾಂಗ್‌ಟಕ್ (ಸಿಕ್ಕಿಂ) ಗೆ ಹೊರಟರು. ಅವರು ಸಿಕ್ಕಿಂನ ಸೀಮೆಯನ್ನು ಮಧ್ಯಾಹ್ನದ ಹೊತ್ತಿಗೆ ತಲುಪಿ, ರಾಂಗ್‌ಪೊನಲ್ಲಿ ರಾಜ್ಯ ಅತಿಥಿ ಬಂಗಲೆಯಲ್ಲಿ ತಂಗಿದರು. ಅಲ್ಲಿ ಅವರಿಗೆ ಸಾಂಪ್ರದಾಯಿಕ ಸುಸ್ವಾಗತ ಕೋರಲಾಯಿತು. ಅನಂತರ ಒಂದು ಗಂಟೆಯ ಪ್ರಯಾಣದ ನಂತರ ಅವರು ನೈಸರ್ಗಿಕ ಪರಿಸರದಿಂದ ಸುತ್ತುವರಿಯಲಾದ ಒಂದು ತಂಗುಧಾಮವನ್ನು ತಲುಪಿದರು. ಅವರು ಅಲ್ಲಿನ ಸಾಂಪ್ರದಾಯಿಕ ವಾಸ್ತುಶಿಲ್ಪವನ್ನು ಶ್ಲಾಘಿಸಿದರು. ಅಲ್ಲಿನ ಸ್ಥಳೀಯ ಅಭ್ಯಾಸಿಗಳು ಗುರುಗಳಿಗೆ ಅಭಿನಂದನೆ ಸಲ್ಲಿಸಿದರು. ಹಾಗೂ ದೊಡ್ಡ ಅಂಗಳದ ನಸುಬಿಸಿಲಿನಲ್ಲಿ ಬೈಠಕನ್ನು ಆನಂದಿಸಿದರು. ಗುರುಗಳಲ್ಲಿ ತಾವು ಸಿಕ್ಕಿಂನಲ್ಲಿರುವುದರ ಸಂತೋಷವು ಎದ್ದುಕಾಣುವಂತಿತ್ತು ಹಾಗೂ ಅವರು ಇದನ್ನು ಹಲವಾರು ಬಾರಿ ಹೇಳಿದರು.

ಪರಸ್ಪರ ಮಾತುಕತೆಯ ಅವಧಿಯಲ್ಲಿ ಯಾರೋ ಒಬ್ಬರು, ಜನರು ಸಹಜಮಾರ್ಗಕ್ಕೆ ಸೇರುತ್ತಾರೆ ಆದರೆ ಬಹು ಬೇಗ ಬಿಟ್ಟು ಬಿಡುತ್ತಾರೆ ಎಂದರು. ಇದಕ್ಕೆ ಗುರುಗಳು, "ಜನರು ಬರುತ್ತಾರೆ, ಹೋಗುತ್ತಾರೆ. ಆದರೆ ಒಮ್ಮೆ ಅವರಿಲ್ಲಿದ್ದಾರೆಂದ ಮೇಲೆ ಅವರೆಲ್ಲಿ ಹೋಗುತ್ತಾರೆ ಎಂಬುದನ್ನು ನೋಡುವುದು ನನ್ನ ಜವಾಬ್ದಾರಿ" ಎಂದರು.

ಸಂಜೆಯ ಸತ್ಸಂಗ ಪ್ರಾರಂಭಿಸುವ ಮೊದಲು ಅವರು ಅಲ್ಲಿದ್ದವರನ್ನೆಲ್ಲಾ "ನೀವೆಲ್ಲಾ ಸಿದ್ಧರಿರುವಿರಾ?" ಎಂದು ಕೇಳಿದರು. ಈ ಪ್ರಶ್ನೆಯು ಅವರ ಸಿಕ್ಕಿಂ ವಾಸ್ತವ್ಯವನ್ನು ಧ್ವನಿಸಿತು. ರಾತ್ರಿ ಭೋಜನ ಸಮಯದಲ್ಲಿ ಆವರು ತಮ್ಮ ಮತ್ತು ಬಾಬೂಜಿಯವರ ನಡುವಣ ಬಾಂಧವ್ಯದ ಸಂಗತಿಗಳನ್ನು ಹಂಚಿಕೊಂಡರು.

ನಾಲ್ಕನೆಯ ದಿವಸವು ಬೆಳಿಗ್ಗೆ ಏಳು ಗಂಟೆಯ ಸತ್ಸಂಗದೊಂದಿಗೆ ಪ್ರಾರಂಭವಾಯಿತು.

ಸಿಲಿಗುರಿ



ರಾಂಗ್‌ಪೊ



ಗಾಂಗ್‌ಟಕ್





ಅಂದು ಸಂಜೆ ಒಂದು ಲಘು ಸಾಂಸ್ಕೃತಿಕ ಕಾರ್ಯಕ್ರಮವಿತ್ತು. ಅವರು ಅಭ್ಯಾಸಿಗಳೊಂದಿಗೆ ಶಿಬಿರಾಗ್ನಿಯ ಸುತ್ತ ಕುಳಿತು ಎಲ್ಲರೊಂದಿಗೆ ರಾತ್ರಿ ಭೋಜನಮಾಡುತ್ತಾ ಕೆಲವು ಪುರಾಣ ಕತೆಗಳನ್ನು ಹೇಳಿದರು.

ಅವರು, ಸಿಕ್ಕಿಂ ಅಭ್ಯಾಸಿಗಳು ಹಬ್ಬದೂಟವನ್ನು ಏರ್ಪಡಿಸಿದುದಕ್ಕಾಗಿ ಅಭಿನಂದಿಸಿದರು. ಹಾಗೂ ಪ್ರಭು ರಾಮ ಮತ್ತು ಕೇವತ (ನಾವಿಕ)ರ ಕತೆ ಹೇಳಿ " ನೀವು ನಮ್ಮ ದೇಹಗಳಿಗೆ ಆಹಾರ ಒದಗಿಸಿರುವುದರಿಂದ, ನಾನು ನಿಮ್ಮೆಲ್ಲರ ಆತ್ಮಗಳಿಗೂ ಆಹಾರ ದೊರಕಲೆಂದು ಪ್ರಾರ್ಥಿಸುತ್ತೇನೆ" ಎಂದರು.

ನವಂಬರ್ 5ರಂದು ಗುರುಗಳು ಸ್ಥಳೀಯ ಪೇಟೆಗೆ ಹೋಗಿ CREST ಗ್ರಂಥಾಲಯಕ್ಕಾಗಿ ಅನೇಕ ಪುಸ್ತಕಗಳನ್ನು ಆರಿಸಿಕೊಂಡರು. ಸ್ಥಳೀಯ ಪ್ರಶಿಕ್ಷಕರ ನಿವಾಸದಲ್ಲಿ ಸತ್ಸಂಗ ನಡೆಸಿಕೊಟ್ಟು ಅಭ್ಯಾಸಿಗಳೊಂದಿಗೆ ಸ್ವಲ್ಪ ಕಾಲ ಕಳೆದರು. ಅದೊಂದು ಸುಂದರ ದಿನ ಹಾಗೂ ಅವರ ದಿವ್ಯ ಕೃಪೆಯಲ್ಲಿ ಮುಳುಗಿ ಎಲ್ಲರೂ ಆನಂದ ಹೊಂದಿದರು.

ಸಂಜೆ ಸತ್ಸಂಗದ ನಂತರ ಗುರುಗಳು ಎಲ್ಲಾ ಮಾನವಜೀವಿಗಳೂ ಒಂದೇ, ಜನರ ನಡುವೆ ಯಾವುದೇ ಅಡೆತಡೆಗಳಿರಬಾರದು, ಆಧ್ಯಾತ್ಮಿಕತೆಯಲ್ಲಿ ಭೇದ ಭಾವಗಳಿಲ್ಲ, ಅಲ್ಲಿ ಕೇವಲ ಸತ್ಯವಸ್ತುವಿದೆ, ಈ ಸತ್ಯವಸ್ತುವೇ ಎಲ್ಲಾ ಜೀವಿಗಳ ಅಂತಸ್ಸತ್ವ ಎಂದು ಒತ್ತಿ ನುಡಿದರು.

6ನೇ ನವಂಬರ್ ಸಿಕ್ಕಿಂನಿಂದ ಹೊರಟು ಸಿಲಿಗುರಿಯನ್ನು ತಲುಪಿ ಆಶ್ರಮ ನಿವೇಶನದಲ್ಲಿ ಸುಡು ಬಿಸಿಲಿನಲ್ಲಿ ಸತ್ಸಂಗ ನಡೆಸಿಕೊಟ್ಟು ಎಲ್ಲರಿಗೂ ಪ್ರಸಾದವನ್ನು ಹಂಚಿದರು. ಭೋಜನಾನಂತರ ಕೊಲ್ಕತಕ್ಕೆ ಹೊರಟರು.

## ಒರಿಸ್ಸಾ

ನವಂಬರ್ 15ರಂದು ಖರಗಪುರದಿಂದ 350 ಕಿ.ಮೀ. ರಸ್ತೆಯಲ್ಲಿ ಪ್ರಯಾಣ ಮಾಡಿ ಭುವನೇಶ್ವರ ತಲುಪಿದರು. ಸುಮಾರು ಬೆಳಿಗ್ಗೆ 11 ಗಂಟೆ ಹೊತ್ತಿಗೆ ಒರಿಸ್ಸಾದಲ್ಲಿರುವ ಒಂದು ಚಿಕ್ಕ ಕೇಂದ್ರವಾದ ಭದ್ರಕ ಎಂಬಲ್ಲಿಗೆ ಅವರ ವಾಹನ ಪಂಕ್ತಿ ತಲುಪಿತು. ಇಲ್ಲಿ ಅಭ್ಯಾಸಿಗಳನ್ನು ಸಂಧಿಸಿ, ಭುವನೇಶ್ವರಕ್ಕೆ ಹೊರಡುವ ಮೊದಲು ಭೋಜನ ಮಾಡಿದರು.

ಸುಮಾರು ಸಂಜೆ 4.45 ರ ವೇಳೆಗೆ ಭುವನೇಶ್ವರದಲ್ಲಿನ ಹೋಟೆಲ್ ತಲುಪಿದರು. ಬಹಳ ಮಳೆಯಿದ್ದರೂ ಸಹ ಅಭ್ಯಾಸಿಗಳು ಸುಸ್ವಾಗತ ಕೋರಿದರು. ಅಂಗುಲ್ ಮತ್ತು ಕಟಕ್ ಗೆ ಪ್ರಥಮ ಭೇಟಿ ಇತ್ತು ಸುಮಾರು 22 ವರುಷಗಳ ನಂತರ ಭುವನೇಶ್ವರಕ್ಕೆ ಇದು ಅವರ ಪ್ರಥಮ ಭೇಟಿ ಹಾಗೂ ಒರಿಸ್ಸಾಗೆ ಎರಡನೆಯ ಭೇಟಿ.

ನವಂಬರ್ 16ರಂದು ಗುರುಗಳು (ಒರಿಸ್ಸಾದ ಪ್ರಥಮ) ಆಶ್ರಮ ನಿವೇಶನಕ್ಕೆ ಹೊರಟರು. ಸುಮಾರು 350 ಅಭ್ಯಾಸಿಗಳಿಂದ ಅದ್ಭುತ ಸ್ವಾಗತವನ್ನು ಪಡೆದರು. ಸತ್ಸಂಗದ ನಂತರ ಗುರುಗಳು ತಮ್ಮ ಭಾಷಣದಲ್ಲಿ "ಸಂಶಯವು ಆತ್ಮಕ್ಕೆ ವಿಷ. ದೇವರ ಅಸ್ತಿತ್ವವೆಂಬಂತಹ ಕೆಲವು ವಿಷಯಗಳಲ್ಲಿ, ಸಂಶಯವಿರಬಾರದು. ಬಾಬೂಜಿಯವರು, ಪದ್ಧತಿಯನ್ನು ಪರೀಕ್ಷಿಸಿ, ನಿಮ್ಮ ಭವಿಷ್ಯತ್ತಿನ ಗುರುವನ್ನು ಪರೀಕ್ಷಿಸಿ. ಸರಿಯಾದ ಗುರುವನ್ನು ಪಡೆದೆವೆಂದು ನಿಮಗೆ ತೃಪ್ತಿಯಾದಾಗ ಮಾತ್ರವೇ ನೀವು ಅವಿವೇಕದಿಂದ ನಿಮ್ಮನ್ನು ಅವರಿಂದ ಕತ್ತರಿಸಿ ದೂರ ಹೋಗಬಾರದೆಂಬಂತೆ ಅವರಿಗೆ ಉಕ್ಕಿನಿಂದ ಬಂಧಿಸಿಕೊಳ್ಳಿ, ಎಂದು ತಿಳಿಸಿ ಅಭ್ಯಾಸಿಗಳಿಗೆ ಅಥವಾ ಭವಿಷ್ಯದ ಅಭ್ಯಾಸಿಗಳಿಗೆ ಸಾಕಷ್ಟು ರಿಯಾಯಿತಿ ತೋರಿದ್ದಾರೆ" ಎಂದು ಹೇಳಿದರು.ನವಂಬರ್ 18ರಂದು ಗುರುಗಳು ಧ್ಯಾನ ಮಂದಿರಕ್ಕೆ ಬೆಳಿಗ್ಗೆ 8.35ಕ್ಕೆ ಬಂದರು. ಅವರು ಬಾಬೂಜಿಯವರ ದಿವ್ಯ ಲೋಕದಿಂದ ಪಿಸುಮಾತುಗಳು ಸಂಪುಟ 1 ಮತ್ತು 2 ರ ಬಗ್ಗೆ ಮಾತನಾಡಿದರು. ಈ ಸಂದೇಶಗಳು ಶೃತಿ ಎಂಬ ವರ್ಗಕ್ಕೆ ಸೇರಿವೆ. ಏಕೆಂದರೆ ಯಾರೂ ಅವುಗಳ ಬಗ್ಗೆ ಚಿಂತಿಸಿಲ್ಲ, ಬರೆದಿಲ್ಲ ಅಥವಾ ಅವುಗಳನ್ನು ಟೈಪು ಮಾಡಿಲ್ಲ. ಮೂಡಿ ಬಂದ ಅವುಗಳನ್ನು ಸ್ವೀಕರಿಸಿ ಬರೆದಿಡಲಾಯಿತು. ಹಿಂದೆಯೂ ಇದ್ದ, ಈಗಲೂ ಇರುವ ಮತ್ತು ಭವಿಷ್ಯದಲ್ಲಿಯೂ ಇರುವ ಆತ್ಮನ ಸ್ವಾತಂತ್ರ್ಯವೇ ಏಕೈಕ ಸ್ವಾತಂತ್ರ್ಯ ಎಂಬುದನ್ನು ನಾವು ನೆನಪಿನಲ್ಲಿಡಬೇಕು ಎಂದೂ ಸಹ ಹೇಳಿದರು. ಆ ಸ್ವಾತಂತ್ರ್ಯವನ್ನು ಗಳಿಸಿಕೊಳ್ಳಬೇಕು, ಏಕೆಂದರೆ ಆತ್ಮವು ದುರ್ದೈವದಿಂದ ಯಾವುದೋ ಒಂದು ರೀತಿಯಲ್ಲಿ ಈ ಮಾಂಸ ಮತ್ತು ರಕ್ತಗಳ ಶರೀರದಲ್ಲಿ ಬಂಧಿತವಾಗಿದೆ.

ಆನಂತರ ಅವರು ಸತ್ಸಂಗ ನಡೆಸಿಕೊಟ್ಟು, ಅಭ್ಯಾಸಿಗಳೊಂದಿಗೆ ಸ್ವಲ್ಪ ಕಾಲ ಕಳೆದು, ಅವರ ಪ್ರಶ್ನೆಗಳಿಗೆ ಉತ್ತರಿಸಿದರು. ಮರುದಿನ ಅವರು ವಿಮಾನಯಾನದಲ್ಲಿ ಚೆನ್ನೈಗೆ ಹೊರಟರು.

## ಬೆಂಗಳೂರು

ನವಂಬರ್ 28ರಂದು ಬೆಳಿಗ್ಗೆ ಉಪಾಹಾರದ ನಂತರ 8.30 ಗಂಟೆಗೆ ಗುರುಗಳು ಚೆನ್ನೈನಿಂದ ಹೊರಟು ಸುಮಾರು ಬೆಳಿಗ್ಗೆ 11.45ರ ಹೊತ್ತಿಗೆ ನಾಟ್ರಂಪಲ್ಲಿ ಆಶ್ರಮ ತಲುಪಿದರು. ಸುಮಾರು 800 ಅಭ್ಯಾಸಿಗಳಿಗೆ ಅಲ್ಲಿ ಸತ್ಸಂಗ ನಡೆಸಿ, ಮಧ್ಯಾಹ್ನ 1.30 ಕ್ಕೆ ಅಲ್ಲಿಂದ ಹೊರಟು ಬೆಂಗಳೂರಿನ ಪರಂಧಾಮ ಆಶ್ರಮವನ್ನು ಸಂಜೆ 4.30 ರ ವೇಳೆಗೆ ತಲುಪಿದರು.

ಗುರುಗಳು ಭಾನುವಾರ ಬೆಳಿಗ್ಗೆಯ ಸತ್ಸಂಗದ ಮೊದಲು ದಿವ್ಯಲೋಕದಿಂದ ಪಿಸುಮಾತುಗಳು–ಸಂಪುಟ–3ರ ಮುಂಗಡ ಕಾದಿರಿಸುವಿಕೆಯ ಪ್ರಾರಂಭವನ್ನು ಉದ್ಘೋಷಿಸಿ, ಸತ್ಸಂಗ ನಡೆಸಿಕೊಟ್ಟರು. ಅದು 12 ಸಂಪುಟಗಳಾಗಿದ್ದು, ಪ್ರತಿವರ್ಷವೂ ಒಂದು ಸಂಪುಟ ಬಿಡುಗಡೆಯಾಗುವುದೆಂದು ಅವರು ತಿಳಿಸಿದರು.

ಗುರುವಾರ, ಡಿಸೆಂಬರ್ 3ರಂದು ಗುರುಗಳು CRESTಗೆ ಹೊರಟರು. ಅಲ್ಲಿ ನಡೆಯುತ್ತಿದ್ದ ಸಾಧನಾ ಕಾರ್ಯಕ್ರಮದಲ್ಲಿ ಹಾಜರಿದ್ದ ಸುಮಾರು 40 ಅಭ್ಯರ್ಥಿಗಳು ಸುಸ್ವಾಗತ ಕೋರಿದರು. ಸಂಜೆ ಅವರು ಕ್ಯಾಂಪಸ್‌ನಲ್ಲಿ ಗಾಲ್ಫ್ ಗಾಡಿಯಲ್ಲಿ ಕುಳಿತು ಓಡಾಡಿದರು. ಇದರಿಂದ ಉಪಸ್ಥಿತರಿದ್ದ ಅಭ್ಯಾಸಿಗಳಿಗೆ ಹರ್ಷವಾಯಿತು.

4ರಂದು ಗುರುಗಳು ಸಾಧನಾ ಕಾರ್ಯಕ್ರಮದ ಸಮಾರೋಪ ಸಮಾರಂಭ ನಡೆಸಿಕೊಟ್ಟರು. ಹಾಗೂ ಅಲ್ಲಿ ಭಾಗವಹಿಸಿದ್ದ ಪ್ರತಿಯೊಬ್ಬ ಅಭ್ಯರ್ಥಿಗೂ ಪ್ರಮಾಣಪತ್ರ ವಿತರಿಸಿದರು. ಅವರ ಉಪಸ್ಥಿತಿಯಲ್ಲಿ ಇರುವುದಕ್ಕೂ ಹಾಗೂ ಕಾರ್ಯಕ್ರಮದಲ್ಲಿ ಭಾಗವಹಿಸಿದುದಕ್ಕೂ ತಮ್ಮ ಸಂತೋಷವನ್ನು ಅಭಿವ್ಯಕ್ತಗೊಳಿಸಿದ ಕೆಲವು ಅಭ್ಯಾಸಿಗಳ ಮಾತನ್ನು ತಾಳ್ಮೆಯಿಂದ ಕೇಳಿಸಿಕೊಂಡರು. ಅವರು, "ನೋಡಿ,

ಸಿಲಿಗುರಿ



ಭುವನೇಶ್ವರ








ಬೆಂಗಳೂರು



ತಿಪಟೂರು

ಬೋಧನೆ–ಸಾಧನೆ, ಬೋಧನೆ–ಸಾಧನೆ, ಇದು ಏಣಿಯ ಮೆಟ್ಟಿಲುಗಳನ್ನು ಒಂದರ ನಂತರ ಒಂದರಂತೆ ಹತ್ತುವಂತಿದೆ. CREST ನಲ್ಲಿ ನಾವು ಈ ಬೋಧನೆಗಳ ಸಾಧ್ಯತೆಯನ್ನು, ಶಿಕ್ಷಣ ಸ್ವೀಕರಿಸಲು ಹಾಗೂ ಇಚ್ಛಿಸುವ ಜನರಿಗೆ ತರಬೇತಿ ನೀಡಲು ಸೌಲಭ್ಯಗಳನ್ನು ಹೊಂದಿರುವುದು ನನಗೆ ಸಂತೋಷವಾಗಿದೆ, ಆದರೆ ಸ್ವೀಕೃತಿ ಮಾತ್ರ ಸಾಲದು. ಇಲ್ಲಿ ಕಲಿಸಿರುವಂತೆ ಮುಂದೆ ಬದ್ಧರಾಗಿರಲು ಅವರು ಇಚ್ಛಿಸುವರೇನು?" ಎಂದು ಹೇಳಿದರು.

5ನೇ ಡಿಸೆಂಬರ್ ಶನಿವಾರ, ಗುರುಗಳು CREST ನಲ್ಲಿ ಕರ್ನಾಟಕ ಪ್ರಶಿಕ್ಷಕರ ಸಮ್ಮೇಳನವನ್ನು, ಪ್ರಶಿಕ್ಷಕರು ತಮ್ಮ ಹೃದಯಪೂರ್ವಕವಾಗಿ ಕೆಲಸ ಮಾಡಲು ಪ್ರೇರೇಪಿಸುವಂತಹ ಬಲವಾದ ಸಂದೇಶದೊಂದಿಗೆ ಉದ್ಘಾಟಿಸಿದರು. ಭೇಟಿ ಇತ್ತಿದ್ದ ಕೆಲವು ವಿದೇಶೀ ಪ್ರಶಿಕ್ಷಕರೂ ಸೇರಿದಂತೆ ಅಲ್ಲಿ 145 ಪ್ರಶಿಕ್ಷಕರಿದ್ದರು.

## ತಿಪಟೂರು

ಗುರುಗಳು 6ನೇ ಡಿಸೆಂಬರ್ ಭಾನುವಾರದಂದು ಕ್ರೆಸ್ಟ್‌ನಿಂದ ಸುಮಾರು ಬೆಳಿಗ್ಗೆ 8 ಘಂಟೆಗೆ ಬೆಂಗಳೂರಿನಿಂದ ವಾಯುವ್ಯ (north west) ದಿಕ್ಕಿನಲ್ಲಿ 160 ಕಿ.ಮೀ. ದೂರದಲ್ಲಿ ಸುಮಾರು 90 ಅಭ್ಯಾಸಿಗಳಿರುವ ತಿಪಟೂರಿಗಾಗಿ ಹೊರಟರು. ಇದು ತಿಪಟೂರಿಗೆ ಗುರುಗಳ ಮೂರನೆಯ ಭೇಟಿ. ಧ್ಯಾನ ಮಂದಿರ ಹಾಗೂ ಇತರೆ ನಿರ್ಮಾಣ ಕೆಲಸಗಳು ಮುಗಿದ ನಂತರದ ಮೊದಲನೆಯ ಭೇಟಿಯಾಗಿತ್ತು. ಬಂದ ಕೂಡಲೆ ಅವರು ಸಂಜೆ 5 ಗಂಟೆ ಮತ್ತು ರಾತ್ರಿ 9 ಗಂಟೆಗೆ ಸತ್ಸಂಗವಿದೆಯೆಂದು ಘೋಷಿಸಿ ಅದನ್ನು ತಾವೇ ನಡೆಸಿಕೊಟ್ಟರು. ಹತ್ತಿರದ ಹಾಗೂ ಬೆಂಗಳೂರು ಕೇಂದ್ರದಿಂದ ಅವರೊಡನೆ ಇರಲು ಬಂದಿದ್ದ ಸುಮಾರು 1000 ಅಭ್ಯಾಸಿಗಳಿದ್ದರು.

ಮರುದಿನ ಗುರುಗಳು ಬೆಳಿಗ್ಗೆ ಅಂತಿಮ ಬೈಠಕನ್ನು ನೀಡಿ, ಸ್ವಲ್ಪ ಹೊತ್ತು ವಿಶ್ರಮಿಸಿ ತುಮಕೂರಿಗೆ ಹೊರಟರು. ತುಮಕೂರಿನ ಅಭ್ಯಾಸಿಗಳು ಗುರುಗಳನ್ನು ಬಹಳವಾಗಿ ಪ್ರತೀಕ್ಷಿಸುತ್ತಿದ್ದರು. ಗುರುಗಳು ತಮ್ಮ ವಾಸ್ತವ್ಯದ ಸಮಯದಲ್ಲಿ ಬಹಳ ಹುರುಪಿನಿಂದ ಇದ್ದು ಬಾಬೂಜಿಯವರ ಬಗ್ಗೆ ಹಾಗೂ ಮಹಾಭಾರತದ ಪ್ರಸಂಗಗಳ ಬಗ್ಗೆ ಬಹಳ ಹೊತ್ತು ಮಾತನಾಡುತ್ತಿದ್ದರು. ಅವರು, "ನಾವು ಕತ್ತಲೆಯಲ್ಲಿರುವಾಗಲೇ ಕತ್ತಲೆಯನ್ನು ನೋಡಬಲ್ಲೆವು. ಆದರಿಂದ ಹೊರ ಬರುವುದು ಹೇಗೆ ? ಹೊರಗೆ ಬನ್ನಿ" ಎಂದರು.

ಗುರುಗಳು ತುಮಕೂರಿನಿಂದ ಭೋಜನಾನಂತರ ಹೊರಟು ಬೆಂಗಳೂರನ್ನು ಸುಮಾರು ಸಂಜೆ 4.30ರ ವೇಳೆಗೆ ತಲುಪಿದರು. ತಮ್ಮ ಕಾಫಿ ಮುಗಿಸಿ ಪರಂಧಾಮಕ್ಕೆ ಸತ್ಸಂಗ ನಡೆಸಲು ಹೋದರು. ಇಡೀ ದಿನ ಅತಿಯಾದ ಕೆಲಸದ ದಿನವಾದರೂ ಸಹ ರಾತ್ರಿ ಬಹಳ ಹೊತ್ತಿನವರೆಗೆ ತಮ್ಮ ಕೆಲಸ ಮಾಡುವುದನ್ನು ಮುಂದುವರೆಸಿದರು. ಅವರು ಬೆಂಗಳೂರಿನಲ್ಲಿ ಒಂದು ದಿನ ತಮ್ಮ ವಾಸ್ತವ್ಯವನ್ನು ಮುಂದುವರೆಸಿ ವಿಶ್ರಾಂತಿ ತೆಗೆದುಕೊಳ್ಳಲು ತೀರ್ಮಾನಿಸಿದರು.



ತುಮಕೂರು

## ತಿರುಪ್ಪೂರು

9 ರಂದು ಗುರುಗಳು ಬೆಳಿಗ್ಗೆ 6.15ಕ್ಕೆ ಬೆಂಗಳೂರನ್ನು ಬಿಟ್ಟು 7.30ಕ್ಕೆ ಕೃಷ್ಣಗಿರಿಯನ್ನು ತಲುಪಿದರು. ಉಪಾಹಾರದ ನಂತರ ಗುರುಗಳು 9 ಗಂಟೆಗೆ ಸತ್ಸಂಗ ನಡೆಸಿದರು. ಅವರು ಭೋಜನಕ್ಕಾಗಿ ಈರೋಡಿನಲ್ಲಿ ಕೊಂಚ ಕಾಲ ವಿಶ್ರಮಿಸಿ, ತಿರುಪ್ಪೂರಿನ ಡೈಮಂಡ್ ಜುಬಿಲಿ ಪಾರ್ಕ್ ಅನ್ನು ತಲುಪಿದರು. ಬಂದ ನಂತರದ ತತ್‌ಕ್ಷಣದ ಕಾಫಿಯಾದ ನಂತರ ಗುರುಗಳು, "ನೀನು ಈಗ ಆಗಲೇ ನಿನ್ನ ಕಾಫಿ ತೆಗೆದುಕೊಂಡಿದ್ದೀಯ, ನಿನ್ನ ಕೆಲಸವನ್ನು ಪ್ರಾರಂಭಿಸಬಹುದು" ಎಚಿದು ಬಾಬೂಜಿ ಹೇಳುತ್ತಿದ್ದಾರೆ ಎಂದು ಹೇಳಿದರು. ಅವರು ತತ್‌ಕ್ಷಣವೇ ಧ್ಯಾನ ಮಂದಿರಕ್ಕೆ ಹೊರಟು ಸಂಜೆ 6.15ಕ್ಕೆ ಸತ್ಸಂಗ ನಡೆಸಿಕೊಟ್ಟರು. ಗುರುಗಳು ಮುಂದಿನ ಮೂರುದಿನಗಳು 6.15ಕ್ಕೆ, ಬೆಳಿಗ್ಗೆ 11 ಕ್ಕೆ ಮತ್ತು ಸಂಜೆ 5.30 ಕ್ಕೆ ಮೂರು ಸತ್ಸಂಗಗಳಿರುತ್ತದೆಂದು ಘೋಷಿಸಿದರು.



ತಿರುಪ್ಪೂರು

ಗುಜರಾತಿನ ಪ್ರಶಿಕ್ಷಕರುಗಳೂ, ಕೇರಳ, ತಮಿಳುನಾಡಿನ ಅಭ್ಯಾಸಿಗಳೂ ಸೇರಿ ಸುಮಾರು 4000 ಅಭ್ಯಾಸಿಗಳಿದ್ದರು. ಎಲ್ಲಾ ಸೌಕರ್ಯ–ಸೌಲಭ್ಯಗಳೂ ಲಭ್ಯವಿದ್ದಿತು. ಅದೊಂದು ಭಂಡಾರದಂತಹ ವಾತಾವರಣವೇರ್ಪಟ್ಟಿತ್ತು. ಗುರುಗಳೇ ಎಲ್ಲಾ ಮೂರು ಸತ್ಸಂಗಗಳನ್ನೂ ಧ್ಯಾನ ಮಂದಿರದಲ್ಲಿಯೇ ನಡೆಸಿಕೊಟ್ಟರು.

11 ರಂದು ಗುರುಗಳು ಬೆಳಿಗ್ಗೆ 6.30 ಮತ್ತು 11 ಗಂಟೆಗೆ ಧ್ಯಾನ ಮಂದಿರದಲ್ಲಿ ಸತ್ಸಂಗ ನಡೆಸಿದರು. ಮಧ್ಯಾಹ್ನ ಅವರು ನಗರದಲ್ಲಿರುವ ಒಬ್ಬ ಅಭ್ಯಾಸಿಯ ಮನೆಗೆ ಹೋಗಿ, ದಿನದ ಕೊನೆಯ ಸತ್ಸಂಗ ನಡೆಸಲು ವೇಳೆಗೆ ಸರಿಯಾಗಿ ಸಂಜೆ 5.30 ಕ್ಕೆ ಹಿಂತಿರುಗಿ ಬಂದರು.



ಮಲಂಪುಳಕ್ಕೆ





ಕೊಯಮತ್ತೂರು

12ರಂದು ಎಲ್ಲಾ ಮೂರು ಸತ್ಸಂಗಗಳನ್ನೂ ಧ್ಯಾನ ಮಂದಿರದಲ್ಲಿಯೇ ನಡೆಸಿದರು. 13 ರಂದು ಬೆಳಿಗ್ಗೆ 6.30 ರ ಸತ್ಸಂಗ ನಡೆಸಿ ಕೊಯಮತ್ತೂರು ಆಶ್ರಮಕ್ಕೆ ಹೊರಟು ಅಲ್ಲಿಗೆ ಬೆಳಿಗ್ಗೆ 11 ಗಂಟೆಗೆ ಸೇರಿದರು. ಗುರುಗಳು ಕೊಂಚ ವಿಶ್ರಮಿಸಿ, ಹೊರಗಡೆ ಅಭ್ಯಾಸಿಗಳೊಂದಿಗೆ ಕೊಂಚಕಾಲ ಕುಳಿತು, ನಂತರ ಮಲಂಪುಳಕ್ಕೆ ಹೊರಟರು.

14ರಂದು ಮಲಂಪುಳದಲ್ಲಿ ಸ್ವಲ್ಪ ಶಾಂತವೇಳೆಯನ್ನು ಕಳೆದು, ಭೋಜನಾನಂತರ ಕೊಯಮತ್ತೊರಿಗೆ ಹೊರಟು ಅಭ್ಯಾಸಿಯೊಬ್ಬರ ಮನೆಗೆ ಮಧ್ಯಾಹ್ನ 3 ಗಂಟೆಗೆ ಬಂದು ಸೇರಿದರು. ರಾತ್ರಿ ಭೋಜನಕ್ಕೆ ಮೊದಲು, ಹಾಗೂ ನಂತರ ಅವರು ಹೊರಗೆ ಕುಳಿತಾಗ, ಎಲ್ಲಾ ಅಭ್ಯಾಸಿಗಳೂ ಅವರೊಂದಿಗೆ ಸುಸಮಯ ಕಳೆದರು.

15ರಂದು ರಾತ್ರಿ ಭೋಜನಕ್ಕೆ ಮುನ್ನ ಗುರುಗಳು ತಮ್ಮ ಕೊಠಡಿಯಲ್ಲಿ ಕುಳಿತು ಅನೌಪಚಾರಿಕವಾಗಿ ವಿವಿಧ ವಿಷಯಗಳ ಬಗ್ಗೆ ಮಾತನಾಡಿದರು. ಹಿಂದೂ ತತ್ವ ಶಾಸ್ತ್ರದ ಆಧಾರ ಸ್ತಂಭಗಳಾದ ವೇದಗಳು, ಬ್ರಹ್ಮ ಸೂತ್ರಗಳು ಮತ್ತು ಗೀತೆ, ಆಯುರ್ವೇದ , ಯುಗಗಳು ಹಾಗೂ ಕಾಲದ ಪರಿಕಲ್ಪನೆಗಳ ಬಗ್ಗೆ ವಿವರಣೆ ಇದ್ದಿತು. ಅವರ ಅತಿಪ್ರಿಯ ವಿಷಯವಸ್ತುವಾದ ವಿಜ್ಞಾನದ ಕಟ್ಟುಕತೆಗಳ ಬಗ್ಗೆಯೂ ಸ್ವಲ್ಪ ಇದ್ದಿತು. ಅವರು ಐನ್‌ಸ್ಟೀನ್‌ನ ಪ್ರಯೋಗಗಳ ಬಗ್ಗೆಯೂ ಮತ್ತು ಐಸಾಕ್ ಅಸಿಮೋವ್ ಅವರ 'ಫೌಂಡೇಷನ್'ಮಾಲಿಕೆಯ ಬಗ್ಗೆಯೂ ಮಾತನಾಡಿದರು. ಈ ಸಭೆಯ ಕೆಲವು ಪ್ರಮುಖ ಅಂಶಗಳೆಂದರೆ:

ಗುರುಗಳ ವಿವರಣೆ ಎಂದರೆ ಯೋಚನೆಗಳು ತಮ್ಮಷ್ಟಕ್ಕೆ ತಾವೇ ಶಕ್ತಿಯನ್ನು ಹೊಂದಿಲ್ಲ. ಆದರೆ ಅವು ಶಕ್ತಿ ಮೂಲವನ್ನು ಪ್ರಚೋದಿಸಬಲ್ಲವು. ಹಾಗೂ ಪ್ರಾರ್ಥನ ಪೂರ್ವಕ ಮೊರೆಯಿಡುವುದರಲ್ಲಿ ಶಕ್ತಿಯ ಬಳಕೆ ಹಾಗೂ ತಮ್ಮ ಸ್ವಂತ ಶಕ್ತಿಯನ್ನು ಬಳಸುವುದರಲ್ಲಿ ಇರುವ ಭೇದವನ್ನು ಸಹ ವಿವರಿಸಿದರು.

ಬೆಳಕಿನ ಪ್ರಯಾಣಕ್ಕೂ ವೇಳೆ ಹಿಡಿಯುವುದರಿಂದ, ಉದಾಹರಣೆಗೆ ಅದು (ಸೂರ್ಯನಿಂದ) ಭೂಮಿ ತಲುಪಲು 8 ನಿಮಿಷಗಳು ಹಿಡಿಯುವುದರಿಂದ ನಮ್ಮ ಕಣ್ಣುಗಳ ಮೂಲಕ ನಾವು ನೋಡುವುದು ಯಾವಾಗಲೂ ಭೂತಕಾಲವಾಗಿದೆ, ಅದು ಎಂದೆಂದಿಗೂ 'ಈಗಿನದಾಗಿರುವುದಿಲ್ಲ'.

ಇದೊಂದು ಒಳ್ಳೆಯ ಸಭೆಯಾಗಿದ್ದು ಕೊಠಡಿಯಲ್ಲಿದ್ದ ಪ್ರತಿಯೊಬ್ಬರನ್ನೂ ಬೇರೆ ಒಂದು ಪ್ರಜ್ಞೆಯ ಆಯಾಮಕ್ಕೆ ಕರೆದೊಯ್ದಿತ್ತು. 16 ರಂದು ಗುರುಗಳು ಸಂಜೆ 4.30ಕ್ಕೆ ಚೆನ್ನೈಗೆ ಹೊರಟರು.

## ಚೆನ್ನೈ

ಚೆನ್ನೈಗೆ ಹಿಂತಿರುಗಿದ ಮೇಲೆ ಗುರುಗಳು, ವಿವಿಧ ಆಡಳಿತಾತ್ಮಕ ಕಾರ್ಯಗಳಲ್ಲಿ ಅತೀವ ಕಾರ್ಯಮಗ್ನರಾಗಿದ್ದರು. ಪ್ರಪಂಚದ ವಿವಿಧ ಭಾಗಗಳಿಂದ ಕ್ರಿಸ್‌ಮಸ್ ರಜೆ ಕಳೆಯಲು ಮಣಪಾಕ್ಕಂಗೆ ಬಂದಿಳಿದಿದ್ದ ಸುಮಾರು 200 ಅಭ್ಯಾಸಿಗಳಿದ್ದರು.

ಡಿಸೆಂಬರ್ 24ರ ಸಂಜೆ ಅವರು ಒಂದು ಕ್ರಿಸ್‌ಮಸ್ ಕೇಕನ್ನು ಕತ್ತರಿಸಿದರು. ಅಭ್ಯಾಸಿಗಳು ಕೆರೋಲನ್ನು ಮಾಡಿದರು. ಯಾರೋ ಇಬ್ಬರು 'ಗುರುಗಳೊಂದಿಗೆ ಇರುವಾಗ ಕ್ರಿಸ್ತನೊಂದಿಗೆ ಇರುವಂತಿದೆ" ಎಂದರು. ಅವರು ಈ ಮಾತಿಗೆ ಪ್ರೀತಿಯಿಂದ ಮುಗುಳ್ನಕ್ಕರು. ಆಶ್ರಮಕ್ಕೆ ಹಬ್ಬದ ವಾತಾವರಣ ಅವತರಿಸಿತ್ತು.

ಡಿಸೆಂಬರ್ 31ರಂದು ಗುರುಗಳು ಈಗ ಭಾರತದಲ್ಲಿ ಸುಮಾರು 2 ವಾರಗಳಿಂದ ಇರುವ ಶಿಕ್ಷಣಾಭ್ಯರ್ಥಿಗಳ ಜತೆ ಕಳೆದರು. ಖರಗಪುರದಲ್ಲಿ ಎರಡು ವಾರಗಳನ್ನು ಕಳೆದು ಅವರು ಚೆನ್ನೈಗೆ ತಮ್ಮ ಎರಡನೆಯ ಹಂತದ ತರಬೇತಿ ಕಾರ್ಯಕ್ರಮಕ್ಕೆ ಬಂದಿದ್ದರು.

ಜನವರಿ ಒಂದರಂದು ಗುರುಗಳು ಹೊಸವರ್ಷದ ಆಗಮನವನ್ನು ಸಂಭ್ರಮಿಸುತ್ತಾ ಬೆಳಗಿನ ಸತ್ಸಂಗ ನಡೆಸಿಕೊಟ್ಟರು. ಸೋದರ ಕಮಲೇಶ ಪಟೇಲರು ಗುರುಗಳ ಇತ್ತೀಚಿನ ಕೆಲವು ಉಪನ್ಯಾಸಗಳ ಡಿವಿಡಿ ಮಾಲಿಕೆಯೊಂದನ್ನು ಬಿಡುಗಡೆ ಮಾಡಿದರು.

ಗುರುಗಳು ತಮ್ಮ ಹೊಸವರ್ಷದ ಉಪನ್ಯಾಸದಲ್ಲಿ ಹೀಗೆಹೇಳಿದರು:

"ಆದ್ದರಿಂದ ಸೋದರಿಯರೆ, ಸೋದರರೆ, ನಾವು ಹೃದಯದ ಕರೆಗೆ, ಆಂತರ್ಯದ ದನಿಯ ಕರೆಗೆ ಹೆಚ್ಚು ಗಮನ ನೀಡಬೇಕು. ಅಗತ್ಯ ವಿದ್ದರೆ ಬಾಹ್ಯ ಜಗತ್ತಿಗೆ ನಿಮ್ಮ ಕಿವಿಮುಚ್ಚಿಕೊಳ್ಳಿ, ಕಣ್ಣುಮುಚ್ಚಿಕೊಳ್ಳಿ, ಆಲಿಸಬೇಡಿ. ನಮಗೆ ದೇವರು ದಯಪಾಲಿಸಿರುವ ಪಂಚೇಂದ್ರಿಯಗಳ ಮೂಲಕ ನಾವು ಬಾಹ್ಯದಿಂದ ಆಂತರ್ಯಕ್ಕೆ ನಮ್ಮ ಗಮನವನ್ನು ತಿರುಗಿಸಬೇಕು. ಈ ರೀತಿ ಗಮನ ಹರಿಸದಿದ್ದರೆ ಆಧ್ಯಾತ್ಮಿಕತೆಯು ಮಾತನಾಡುವ ವಿಷಯವಾಗಿ, ಚರ್ಚೆಯ ವಿಷಯವಾಗಿ ತರಬೇತಿ ಪಡೆಯುವ ವಿಷಯವಾಗಿ ಉಳಿಯುತ್ತದೆ, ಆದರೆ ಅದನ್ನು ಲಕ್ಷಿಸುವುದಿಲ್ಲವಾದ ಕಾರಣದಿಂದ ನಾವಿರುವಲ್ಲಿಯೇ ಉಳಿಯುತ್ತೇವೆ."

ಜನವರಿ 4 ಮತ್ತು 8 ರಂದು ಗುರುಗಳು ಅನೇಕ ಮದುವೆಗಳನ್ನು ನೆರವೇರಿಸಿದರು. ಅವರು ಸತ್ಕೋಲ್‌ಗೆ ದೆಹಲಿಯ ಮೂಲಕ 15 ರಂದು ಹೊರಡುವವರಿದ್ದಾರೆ.

ಕ್ರಿಸ್‌ಮಸ್



ವಿದ್ವಾಂಸರೊಂದಿಗೆ



ಚೆನ್ನೈನಲ್ಲಿ ಹೊಸ ವರ್ಷಾರಂಭ



## ಸದಸ್ಯತ್ವದ ಹೊಸ ದರಗಳು:

### ವಾರ್ಷಿಕ ಚಂದಾಗಳು

1. ದಯವಿಟ್ಟು ಎಲ್ಲಾ ವಾರ್ಷಿಕ ಚಂದಾಗಳನ್ನು ಸ್ಪಿರಿಚುಯಲ್ ಹೈರಾರ್ಕಿ ಪಬ್ಲಿಕೇಷನ್ ಟ್ರಸ್ಟ್, ಅಡ್ಮಿನ್ಬಿಲ್ಡಿಂಗ್, ಬಿಎಮ್ಎ, ಎಸ್ಆರ್ಸಿಎಮ್, ಮಣಪಾಕ್ಕಂ, ಚೆನ್ನೈ–600116 ಗೆ ಕಳಿಸಿಕೊಡಿ.

2. ವಾರ್ಷಿಕ ಚಂದಾಗಳು ಏಪ್ರಿಲ್ ಸಂಚಿಕೆಯಿಂದ ಪ್ರಾರಂಭವಾಗಿ, ಆರ್ಥಿಕ ವರ್ಷದೊಂದಿಗೆ ಸರಿಹೊಂದಲು ಮುಂದಿನ ಜನವರಿಗೆ ಕೊನೆಗೊಳ್ಳುತ್ತದೆ.

### ನಿಯತಕಾಲಿಕಗಳು

| | |
|---|---|
| ◆ಕಾನ್ಸ್‌ಟೆಂಟ್ ರಿಮೆಂಬರೆನ್ಸ್(ತ್ರೈಮಾಸಿಕ) | ರೂ.300/– |
| ◆ಹಿಂದಿ/ತಮಿಳು/ತೆಲುಗು/ಕನ್ನಡ/ಗುಜರಾತಿ/ಮಲಯಾಳಂ /ಬಾಂಗ್ಲ (ತ್ರೈಮಾಸಿಕ) | ರೂ.100/– |

### ಆಜೀವ ಸದಸ್ಯತ್ವದ ಚಂದಾಗಳು

ದಯವಿಟ್ಟು ಸದಸ್ಯತ್ವದ ಅರ್ಜಿ ಮತ್ತು ಸ್ಪಿರಿಚುಯಲ್ ಹೈರಾರ್ಕಿ ಪಬ್ಲಿಕೇಷನ್ ಟ್ರಸ್ಟ್ ದತ್ತಿ ಅರ್ಜಿಗಳನ್ನು ಚಂದಾ ಹಣದೊಂದಿಗೆ ಮ್ಯಾನೇಜಿಂಗ್ ಟ್ರಸ್ಟಿ, ಸ್ಪಿರಿಚುಯಲ್ ಹೈರಾರ್ಕಿ ಪಬ್ಲಿಕೇಷನ್ ಟ್ರಸ್ಟ್, ಡಿವೈನ್ ಬ್ಲಿಸ್, ನಾರ್ತ್ ಬ್ಲಾಕ್ 7ಎ, 2/3, ಜಡ್ಜ್ ಕೋರ್ಟ್ ರಸ್ತೆ, ಕೋಲ್ಕತ್ತ 700027.(ಪ.ಬಂ.)ಭಾರತ, ಇದಕ್ಕೆ ಕಳಿಸಿಕೊಡಿ.

### ಪುಸ್ತಕಗಳ / ಶ್ರವಣ ದೃಶ್ಯ ಮಾಧ್ಯಮದ ಆಜೀವ ಸದಸ್ಯತ್ವದ ಚಂದಾಗಳು

| | |
|---|---|
| ◆ಇಂಗ್ಲಿಷ್ | ರೂ.6000/– |
| ◆ಹಿಂದಿ | ರೂ.4500/– |
| ◆ಮರಾಠಿ/ತಮಿಳು/ತೆಲುಗು/ಕನ್ನಡ/ಗುಜರಾತಿ/ಮಲಯಾಳಂ | ರೂ.3000/– |
| ◆ಶ್ರವಣ ದೃಶ್ಯ | ರೂ.25000/– |

### ನಿಯತಕಾಲಿಕ(ತ್ರೈಮಾಸಿಕ)ಗಳಿಗಾಗಿ ಆಜೀವ ಸದಸ್ಯತ್ವದ ಚಂದಾ ದರ

| | |
|---|---|
| ◆ಕಾನ್ಸ್‌ಟೆಂಟ್ ರಿಮೆಂಬರೆನ್ಸ್ | ರೂ.3000/– |
| ◆ಹಿಂದಿ – ಸಹಜ ಮಾರ್ಗ್ | ರೂ.2000/– |
| ◆ತಮಿಳು/ತೆಲುಗು/ಕನ್ನಡ/ಗುಜರಾತಿ/ಮಲಯಾಳಂ | ರೂ.1500/– |

## ಹೊಸ ಪ್ರಕಟನೆಗಳು




ಕಾನ್ಸ್ ಟೆಂಟ್ ರಿಮೆಂಬರೆನ್ಸ್
ಜನವರಿ 2010




ಸತ್ಯೋದಯಂ
ಪುನರ್ ಮುದ್ರಣ, ತಮಿಳು




**Revealing the Personality**




**'Here and Now'**
Set of DVDs

## ಗತಕಾಲಕ್ಕೊಂದು ಇಣುಕುನೋಟ:

ಈ ಹೊಸ ಭಾಗವು, ನಮ್ಮ ಸಂಸ್ಥೆಯ ಸಾಹಿತ್ಯ ಹಾಗೂ ನಿಯತಕಾಲಿಕಗಳಲ್ಲಿ ದಾಖಲಿಸಿರುವಂತೆ ಪೂಜ್ಯ ಲಾಲಾಜಿಯವರ ಕಾಲದಿಂದ ಪ್ರಾರಂಭಿಸಿ ಗುರುಗಳ ಉಲ್ಲೇಖಗಳು ಹಾಗೂ ಸಂಗತಿಗಳ ಒಂದು ನೋಟವನ್ನು ನಿಮ್ಮ ಮುಂದೆ ತೆರೆದಿರಿಸಲು ಆಶಿಸುತ್ತದೆ. ಈ ಸಂಚಿಕೆಯಲ್ಲಿ 60 ವರ್ಷಗಳ ಹಿಂದಿನ ಅವಧಿಯ ಎಂದರೆ 1950 ಕ್ಕೆ ಹಿಂದಿನ ವರ್ಷಗಳ ಬಗ್ಗೆ ಗಮನ ನೀಡಲಾಗಿದೆ. ಈ ಭಾಗವನ್ನು ಓದಿ ಆನಂದಿಸುವಿರೆಂದು ನಾವು ಆಶಿಸುತ್ತೇವೆ.



**ಲಾಲಾಜಿಯವರು** ತಮ್ಮ ಅನೇಕ ಸಹಯೋಗಿಗಳನ್ನು ಭೇಟಿ ಮಾಡಲು ವಿವಿಧ ಸ್ಥಳಗಳಿಗೆ ವ್ಯಾಪಕವಾಗಿ ಪ್ರಯಾಣ ಮಾಡುತ್ತಿದ್ದರು. ಅನೇಕ ಸಾಧಕರೂ ಸಹ ಅವರನ್ನು ಭೇಟಿ ಮಾಡಿ ಅವರ ಮನೆಯಲ್ಲಿ ತಂಗುತ್ತಿದ್ದರು. ಅಭ್ಯಾಸಿಗಳಿಗೆ ಬರೆದ ಅವರ ಪತ್ರಗಳಲ್ಲಿ ನಮೂದಿಸಿರುವ ಕೆಲವು ಸ್ಥಳಗಳೆಂದರೆ, ಬೃಂದಾವನ, ಏಟಾ, ಕಾನ್ಪುರ, ಮೈನ್‌ಪುರಿ, ಮತ್ತು ಉರಾಯಿ ಅವರ ವಿವಿಧ ಪತ್ರಗಳು/ಬರವಣಿಗೆಗಳಿಂದ ಆಯ್ದ ಕೆಲವು ಮುತ್ತುಗಳು.

### ಡಿಸೆಂಬರ್ 1929

ಬಾಬೂಜಿಯವರಿಗೆ ಲಾಲಾಜಿಯವರ ಪತ್ರ :

"ಯಾತನೆಗಳಿಗೊಳಗಾಗುವುದು ಒಳ್ಳೆಯದು. ಮನೆಯು ತಾಳ್ಮೆ ಹಾಗೂ ನಮ್ರತೆಗಳ ಶಾಲೆಯಾಗಿದೆ. ಒಂದು ರೀತಿಯಲ್ಲಿ ಚಿಂತಿಸಿದರೆ, ಅಂತಹ ವಿಷಯಗಳಲ್ಲಿ ಸಹನೆಯು ಒಂದು ತಪಸ್ಸಾಗಿದೆ. ಅಲ್ಲದೆ ಬೇರೆ ರೀತಿಯ ತಪಸ್ಸಿಗಿಂತ ಉತ್ತಮವಾದುದು. ಆದ್ದರಿಂದ ದುಃಖ ಹಾಗೂ ಕೋಪಗಳ ಬದಲು 'ಗೈರತ್' ನ್ನು ಪಡೆದುಕೊಳ್ಳುವುದು ಒಳ್ಳೆಯದು."(ನಿಜವಾಗಿ ತನ್ನ ದೋಷವಿಲ್ಲದಿದ್ದರೂ, ತನ್ನದೇ ದೋಷವೆಂಬ ಅನುಭಾವ)

### ಏಪ್ರಿಲ್ 1930:

ಲಾಲಾಜಿಮಹಾರಾಜರ ಇನ್ನೊಂದು ಪತ್ರ: "ಬಹಳಷ್ಟು ಮಂದಿ ಸಾಂಪ್ರದಾಯಿಕ ಪೂಜೆಗಳನ್ನು ಮಾಡುತ್ತಲೇ ಇರುತ್ತಾರೆ. ನಿಜವಾದ ಕಾತರ ಹಾಗೂ ತವಕ ಮತ್ತು ವ್ಯಾಕುಲತೆಗಳು ಅವರಲ್ಲಿಲ್ಲ. ಇಲ್ಲವಾದಲ್ಲಿ ಅವರು ಖಂಡಿತವಾಗಿ ಸ್ಥಿತಿಗಳನ್ನು ಅನುಭವಿಸುತ್ತಿದ್ದರು ಮತ್ತು ಪ್ರತಿದಿನ ಒಂದು ಹೊಸ ಜೀವನ ಅವರಲ್ಲಿ ತುಂಬಿಕೊಳ್ಳುತ್ತಿತ್ತು."

ಮೂಲ: ರಾಮಚಂದ್ರರ ಆತ್ಮಕತೆ ಸಂ.1 (1899–1932)
ರಾಮಚಂದ್ರರ ಸಮಗ್ರ ಕೃತಿಗಳು. ಸಂ.3



# Ashram Updates

## ಲಖನೌ ಆಶ್ರಮ ಧ್ಯಾನ ಮಂದಿರ

ಲಖನೌ ಐಐಎಂ ರಸ್ತೆಯಲ್ಲಿರುವ ಬಾಬೂಜಿ ಸ್ಮಾರಕ ಆಶ್ರಮದಲ್ಲಿ ಧ್ಯಾನ ಮಂದಿರದ ನಿರ್ಮಾಣ ಕಾರ್ಯ ಪ್ರಾರಂಭವಾಯಿತು. 30ಮೀ ಅಗಲ ಮತ್ತು 48ಮೀ ಉದ್ದವಿರುವ ಈ ಉದ್ದೇಶಿತ ಮಂದಿರದಲ್ಲಿ ಸುಮಾರು 3000 ಅಭ್ಯಾಸಿಗಳಿಗೆ ಕುಳಿತುಕೊಳ್ಳಲು ಸ್ಥಳಾವಕಾಶ ದೊರೆಯಲಿದೆ. ನಿರ್ಮಾಣ ಕಾರ್ಯಕ್ಕೆ ಉಕ್ಕಿನ ಹಂದರ ಬಳಸಲಾಗುತ್ತಿದೆ.

ನವೆಂಬರ್ 11, 2009 ರಂದು ಎಸ್.ಆರ್.ಸಿ.ಎಂ.ನ ಕಾರ್ಯದರ್ಶಿ ಸೋ.ಉಮಾಶಂಕರರಿಂದ ಶಂಕುಸ್ಥಾಪನೆಯಾಗಿದ್ದು, ನಿರ್ಮಾಣ ಕಾರ್ಯ ಮಾರ್ಚ್ 2010ರ ಕೊನೆಯಲ್ಲಿ ಪೂರ್ಣಗೊಳ್ಳುವ ಸಾಧ್ಯತೆ ಇದೆ.

## ವಾರಣಾಸಿ

ವಾರಣಾಸಿಯ ಸಾರನಾಥದಲ್ಲಿರುವ ಲಯ ಯೋಗಾಶ್ರಮದಲ್ಲಿ 2009ರ ನವೆಂಬರ್ 2 ರಂದು ಧ್ಯಾನ ಮಂದಿರದ ನಿರ್ಮಾಣ ಕಾರ್ಯದ ಆರಂಭ ಸೋ.ಉಮಾಶಂಕರರಿಂದ ನೆರವೇರಿತು. ಇದರ ಶಂಕುಸ್ಥಾಪನೆ 2006ರ ಫೆಬ್ರುವರಿ 16ರಂದೇ ಗುರುಗಳಿಂದ ನೆರವೇರಿತ್ತು.

ಅಷ್ಟಭುಜಾಕೃತಿಯ ಧ್ಯಾನ ಮಂದಿರದ ವಿಸ್ತೀರ್ಣ ಸುಮಾರು 8000 ಚದರ ಅಡಿ. ಕಂಬಗಳ ಅಡಿಪಾಯಕ್ಕೆ ಅಗೆತದ ಕಾರ್ಯ ಒಂದೇ ದಿನದಲ್ಲಿ ಮುಗಿದಿದ್ದು, ಎಲ್ಲ ಎಂಟು ಕಂಬಗಳ ಸ್ಥಿರೀಕರಣ ಪೂರ್ಣಗೊಂಡಿದೆ.

## ಚಿರಕ್ಕಾರ, ಕೊಲ್ಲಮ್, ಕೇರಳ

ಇತ್ತೀಚೆಗೆ ತಿರುಪ್ಪೂರಿಗೆ, ಭೇಟಿ ನೀಡಿದ ಗುರುಗಳು ಕೊಲ್ಲಂನ ಚಿರಕ್ಕಾರ ಆಶ್ರಮಕ್ಕೆ 'ತಪೋವನ' ಎಂದು ನಾಮಕರಣ ಮಾಡಿದ್ದಾರೆ. ಈ ಆಶ್ರಮ 2008ರ ಫೆಬ್ರುವರಿ 20ರಿಂದ ಕಾರ್ಯಾರಂಭ ಮಾಡಿತು. ಕೊಲ್ಲಂನ ವಿವಿಧ ಸ್ಥಳಗಳಿಂದ, ನೆರೆಯ ಜಿಲ್ಲೆಗಳಾದ ತಿರುವನಂತಪುರಂ, ಪಟ್ಟಣಂತಿಟ್ಟ ಮತ್ತು ಅಳಪ್ಪುಳದಿಂದ ಅಭ್ಯಾಸಿಗಳು ಈ ಆಶ್ರಮದಲ್ಲಿ ಸೇರುತ್ತಾರೆ. ರಾಷ್ಟ್ರೀಯ ಹೆದ್ದಾರಿ 47ರಲ್ಲಿರುವ 'ತಪೋವನ' ಕೊಲ್ಲಂನ ದಕ್ಷಿಣಕ್ಕೆ 25ಕಿಮೀ ದೂರದಲ್ಲಿ ಮತ್ತು ತಿರುವನಂತಪುರಂನ ಉತ್ತರಕ್ಕೆ 45ಕಿಮೀ ದೂರದಲ್ಲಿದೆ.

ಹಸಿರು ಪರಿಸರದಲ್ಲಿ ನಿಂತಿರುವ ಇದರಲ್ಲಿ ಅನೇಕ ತೆಂಗಿನ ಮರಗಳು ಹಾಗು ಇತರ ಮರಗಳಿದ್ದು, ಸಮೀಪದಲ್ಲಿ ಭತ್ತದ ಗದ್ದೆಗಳಿವೆ. ಆಶ್ರಮದ ಮುಂದೆಯೆ ಶುದ್ಧ ಜಲದಿಂದ ತುಂಬಿ ಹರಿಯುತ್ತಿರುವ ಎಂದೂ ಬತ್ತದ ಹಳ್ಳವೊಂದಿದೆ. ಪ್ರಾದೇಶಿಕ ಸ್ನೇಹಕೂಟಗಳಿಗೆಂದು ಸುಮಾರು 150 ಅಭ್ಯಾಸಿಗಳು ಸೇರುವ ಸ್ಥಳವಿದು. ಇಲ್ಲಿ ಪ್ರತಿ ತಿಂಗಳು ಮೊದಲ ಭಾನುವಾರದಂದು ಪೂರ್ಣ ದಿನದ ಕಾರ್ಯಕ್ರಮ ನಡೆಯುತ್ತದೆ. ಮಕ್ಕಳ ಕೂಟದಿಂದ ಮೌಲ್ಯಾಧಾರಿತ ಆಧ್ಯಾತ್ಮಿಕ ಶಿಕ್ಷಣದ ಕಾರ್ಯಕ್ರಮಗಳೂ ಜರುಗುತ್ತವೆ. ಗುರುಗಳು ಇಲ್ಲಿ ತುಂಬಿರುವ ಪವಿತ್ರ ವಾತಾವರಣದ ಲಾಭ ಪಡೆದುಕೊಳ್ಳಲು ಈ ತಪೋವನಕ್ಕೆ ಎಲ್ಲರಿಗೂ ಸ್ವಾಗತ.

## ಜ಼ೋನಲ್ ಆಶ್ರಮ, ಗೋರಖಪುರ

2009ರ ಡಿಸೆಂಬರ್ 2ರಂದು ಸೋ.ಉಮಾಶಂಕರರು ಆಶ್ರಮದ ನಿವೇಶನದಲ್ಲಿ ಶಂಕುಸ್ಥಾಪನೆ ಮಾಡಿದರು. ಈ ಸಂದರ್ಭದಲ್ಲಿ ಗೋರಖಪುರ ಹಾಗು ಸುತಮುತ್ತಲಿನ ಕೇಂದ್ರಗಳಿಂದ ಸುಮಾರು 150 ಅಭ್ಯಾಸಿಗಳು ಸೇರಿದ್ದರು. ಮುಂಬರುವ ವರ್ಷಗಳ ವಸಂತ ಪಂಚಮಿಯ ಹೊತ್ತಿಗೆ ಧ್ಯಾನ ಮಂದಿರ ಸಿದ್ಧವಾಗುವ ನಿರೀಕ್ಷೆ ಇದೆ. ಆಶ್ರಮದ ಸ್ಥಳ ಹಚ್ಚ ಹಸಿರಿನಿಂದ ಕೂಡಿದ ಕುಶ್ಮಿ ಅರಣ್ಯದ ಎದುರಿಗೆ ಕಂಗೊಳಿಸುತ್ತಿದೆ.
ಆಶ್ರಮಗಳು ದಿವ್ಯ ಕೇಂದ್ರಗಳಾಗಿದ್ದು, ಇಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಗುರುವಿನ ಉಪಸ್ಥಿತಿಯ ಅನುಭವ ಪಡೆಯುತ್ತಾನೆಂದು ಈ ಸಂದರ್ಭದಲ್ಲಿ ಸೋ.ಉಮಾಶಂಕರರು ನುಡಿದರು.

ಲಖನೌ



ವಾರಣಾಸಿ



ಚಿರಕ್ಕಾರ



## ಯುವಜನರ ಕಾರ್ಯಕ್ರಮ– ಹುಬ್ಬಳ್ಳಿ, ಉತ್ತರ ಕರ್ನಾಟಕ

25.10.09ರಂದು ಹುಬ್ಬಳ್ಳಿ ಕೇಂದ್ರದಲ್ಲಿ ದೃಶ್ಯ-ಶ್ರವಣ ಮಾಧ್ಯಮದೊಡನೆ ಯುವಜನರ ಪರಿಚಯ ಕಾರ್ಯಕ್ರಮ ನಡೆಯಿತು. ನಮ್ಮ ಸುಮಾರು ಹದಿನೈದು ಯುವ ಅಭ್ಯಾಸಿಗಳು, ತಮ್ಮ ಇಪ್ಪತ್ತೈದು ಮಿತ್ರರನ್ನು ಕರೆತಂದಿದ್ದರು. ಕಾರ್ಯಕ್ರಮವನ್ನು ಯುವಜನರಿಗೆ ಈ ಮುಂದಿನ ವಿಷಯಗಳ ಮೇಲೆ ಬೆಳಕು ಚೆಲ್ಲುವ ದೃಷ್ಟಿಯಿಂದ ರೂಪಿಸಲಾಗಿತ್ತು: ಮುಂದಾಳತ್ವ, ಶ್ರವಣ ಕಲೆ, ವ್ಯಕ್ತಿತ್ವ ವಿಕಸನ, ಚಾರಿತ್ರ್ಯ ರೂಪಣ, ಸಂಬಂಧಗಳು, ಮಾದರಿ ವ್ಯಕ್ತಿತ್ವ, ಸಂವಹನ, ಮಹತ್ವಾಕಾಂಕ್ಷೆ ಹಾಗು ಅಭಿಲಾಷೆ, ಮತ್ತು ಧ್ಯಾನದ ಮೂಲಕ ಮನೋನಿಯಂತ್ರಣ.

ಅನ್ವಯವಾಗುವ ಕಡೆ ಗುರುಗಳ ದೃಕ್-ಶ್ರವಣಗಳ ತುಣುಕುಗಳನ್ನು ಬಳಸಲಾಗಿತ್ತು. ಕಾರ್ಯಕ್ರಮದ ಮೂಲಕ, ಯುವಜನರಲ್ಲಿ ಅವರ ಮಾತಾಪಿತೃಗಳು, ಸಮಾಜ ಹಾಗು ಎಲ್ಲಕ್ಕಿಂತ ಹೆಚ್ಚಾಗಿ ಅವರಿಗೇ ಸಂಬಂಧಿಸಿದಂತೆ ಹೊಣೆಗಾರಿಕೆಯ ಪ್ರಜ್ಞೆ ಮೂಡಿಸುವ ಪ್ರಯತ್ನ ಮಾಡಲಾಯಿತು. ಭವಿಷ್ಯದ ಸವಾಲುಗಳನ್ನು ಎದುರಿಸಲು ಯುವ ಜನರನ್ನು ಅಣಿಗೊಳಿಸುವ ಮತ್ತು ಆ ಸಾಮರ್ಥ್ಯವನ್ನು ವರ್ಧಿಸುವ ಉದ್ದೇಶವೂ ಇಲ್ಲಿತ್ತು.





## ಪ್ರಶಿಕ್ಷಕರ ತರಬೇತಿ

ಇತ್ತೀಚೆಗೆ ನಡೆದ ಬಹಳಷ್ಟು ಪ್ರಶಿಕ್ಷಕರ ತರಬೇತಿ ಕಾರ್ಯಕ್ರಮಗಳು ಗುರುಗಳ ಭೌತಿಕ ಉಪಸ್ಥಿತಿಯಿಂದ ಅನುಗ್ರಹಿಸಲ್ಪಟ್ಟಿದ್ದವು ಮತ್ತು ಅವರ ಉಪನ್ಯಾಸ ಮತ್ತು ಸತ್ಸಂಗಗಳಿಂದ ಚೈತನ್ಯಮಯವಾಗಿದ್ದವು. ಸಹಭಾಗಿಗಳಿಗೆ ಅದೊಂದು ಉತ್ಸಾಹಜನಕ ಹಾಗು ಉತ್ತೇಜಕ ಅನುಭವ.

### ಗುಜರಾತ್



ಗುಜರಾತಿನ ಎಪ್ಪತ್ತು ಪ್ರಶಿಕ್ಷಕರು ತಿರುಪ್ಪೂರಿಗೆ ಬಂದು ಡಿಸೆಂಬರ್ 10ರಿಂದ 14ರವರೆಗೆ ತಿರುಪ್ಪೂರು, ಕೊಯಮತ್ತೂರು ಮತ್ತು ಮಲಂಪುಳ ಪುನಶ್ಚೇತನ ಕೇಂದ್ರಗಳಲ್ಲಿ ಗುರುಗಳೊಡನಿದ್ದರು. ನೆರೆದಿದ್ದ ಎಲ್ಲ ಅಭ್ಯಾಸಿಗಳಿಗೂ ಗುರುಗಳು ದಿನವೊಂದಕ್ಕೆ ಮೂರು ಬೈಠಕಗಳನ್ನು ನೀಡಿದರು. ಅವರು ಉತ್ತಮ ಅಭ್ಯಾಸಿಗೆ ಸಂಬಂಧಿಸಿದಂತೆ ಈ ಮುಂದಿನ ಅಂಶಗಳ ಬಗ್ಗೆ ಮಾತನಾಡಿದರು.

- ಲಕ್ಷ್ಯವನ್ನು ಆಂತರ್ಯದೆಡೆಗೆ ತಿರುಗಿಸುವುದು.
- ಇನ್ನೊಬ್ಬ ವ್ಯಕ್ತಿಯನ್ನು ಅರ್ಥಮಾಡಿಕೊಳ್ಳುವ ಸಲುವಾಗಿ ಸಹನಾಪೂರ್ಣ ಶ್ರವಣ.
- ಇನ್ನೊಬ್ಬ ವ್ಯಕ್ತಿಯನ್ನು ಟೀಕೆ ಮಾಡದೆ, ಅವರಿಂದ ಕಲಿಯುವ ಮನೋಭಾವ.
- ನಾವು ಮಾಡುವ ಪ್ರತಿಯೊಂದು ಕಾರ್ಯದಲ್ಲೂ ತಾಳ್ಮೆ ಬೆಳೆಸಿಕೊಳ್ಳುವುದು.
- ಚೆನ್ನೈನಲ್ಲಿ ಹೊಸ ವರ್ಷಾರಂಭ

### ಕರ್ನಾಟಕ

5 ಡಿಸೆಂಬರ್ 2009ರಂದು ಬೆಂಗಳೂರಿನ ಕ್ರೆಸ್ಟ್ ನಲ್ಲಿ 140 ಪ್ರಶಿಕ್ಷಕರನ್ನು ಉದ್ದೇಶಿಸಿ ಗುರುಗಳು ಮಾತನಾಡಿದಾಗ ಕರ್ನಾಟಕದಲ್ಲಿ ಸಹಜಮಾರ್ಗ ಸಾಧನೆಯಲ್ಲಿನ ಆಂತರ,



ಭಕ್ತಿಯ ಕೊರತೆ, ಹೊಸ ಕೇಂದ್ರಗಳಿಗೆ ಪ್ರಶಿಕ್ಷಕರ ಭೇಟಿಯ ಅಗತ್ಯ ಮತ್ತು ಮಿಶನ್ನಿನ ನಾಡಿಗಳಂತೆ ಕರ್ತವ್ಯ ನಿರ್ವಹಿಸುವಂತೆ ಒತ್ತಿಹೇಳಿದರು.

### ಆಂಧ್ರ ಪ್ರದೇಶ

ಡಿಸೆಂಬರ್ 25ರಿಂದ 27ರವರೆಗೆ, ಆಂಧ್ರ ಪ್ರದೇಶದ ಪ್ರಶಿಕ್ಷಕರಿಗಾಗಿ ಎರಡು ದಿನಗಳ ಸಭೆ ಚೆನ್ನೈನ ಬಾಬೂಜಿ ಸ್ಮಾರಕ ಆಶ್ರಮದಲ್ಲಿ ನಡೆಯಿತು. ಆ ರಾಜ್ಯದ ರಾಜಕೀಯ ಗಲಭೆಯಿಂದ ವಾಹನ ಸಂಚಾರಕ್ಕೆ ಅಡ್ಡಿಯುಂಟಾದರೂ 180ಕ್ಕಿಂತ ಹೆಚ್ಚು ಪ್ರಶಿಕ್ಷಕರು ಭಾಗವಹಿಸಿದ್ದರು.

ಪ್ರಶಿಕ್ಷಕರ ಕಾರ್ಯ, ಸನ್ನಡತೆ, 'ಪಿಸುಮಾತುಗಳು', ಸಹಜ ಮಾರ್ಗ ಒಂದು ಜೀವನ ಶೈಲಿ ಮುಂತಾದ ವಿಷಯಗಳ ಮೇಲೆ ಉಪನ್ಯಾಸಗಳು ಮತ್ತು ಕೊನೆಯಲ್ಲಿ ಪ್ರತಿಸ್ಪಂದನ ಹಾಗು ಮನನಗಳ ಅಧಿವೇಶನಗಳೂ ನಡೆದವು. ಭಾನುವಾರ ಬೆಳಿಗ್ಗೆ



ಸುಮಾರು ಹನ್ನೊಂದು ಗಂಟೆಗೆ ಗುರುಗಳು ಒಂದು ಉಪನ್ಯಾಸ ಹಾಗು ಒಂದು ಬೈಠಕ ನೀಡಿ ತಮ್ಮೊಡನೆ ಒಂದು ಗಂಟೆಗೂ ಹೆಚ್ಚಿನ ಅವಧಿ ಕಳೆದದ್ದು ಪ್ರಶಿಕ್ಷಕರಿಗೆ ಸಂತಸ ತಂದಿತು.

### ಮಹಾರಾಷ್ಟ್ರ

ನವೆಂಬರ್ 13ರಿಂದ 15ರವರೆಗೆ ಪುಣೆ ಕೇಂದ್ರದಲ್ಲಿ ಏರ್ಪಾಡಾಗಿದ್ದ ಎರಡು ದಿನಗಳ ಪ್ರಶಿಕ್ಷಕರ ಸಮಾವೇಶದಲ್ಲಿ ಮಹಾರಾಷ್ಟ್ರದ ಐವತ್ತು ಪ್ರಶಿಕ್ಷಕರು ಪಾಲ್ಗೊಂಡಿದ್ದರು. ಮೊದಲು ಅಭ್ಯಾಸಿ– ನಿಯಮಿತ ಸಾಧನೆಯ ಮಹತ್ವ, ಅಭ್ಯಾಸಿಗಳಿಗೆ ಬೈಠಕ ನೀಡುವುದು, ಮಿಷನ್ನಿನ ಚಟುವಟಿಕೆಗಳು ಮತ್ತು ಪ್ರಕಟಣೆಗಳು ಮುಂತಾದ ವಿಷಯಗಳನ್ನು ಚರ್ಚಿಸಲಾಯಿತು. ನವ ಪ್ರಶಿಕ್ಷಕರು ಪ್ರೇರಿತರಾಗಿ ತಮ್ಮ ಕಾರ್ಯವನ್ನು ಸಮರ್ಪಣಾಭಾವದಿಂದ ಮಾಡುವ ದೃಢನಿಶ್ಚಯದಿಂದ ಹಿಂತಿರುಗಿದರು.

## ಮುಂಬಯಿ(ಮಹಾರಾಷ್ಟ್ರ)ನಲ್ಲಿ ಮುಕ್ತ ಸಭೆ

2009 ನವೆಂಬರ್ 8ರಂದು ಮುಂಬಯಿ ಅಣುಶಕ್ತಿನಗರದ ಹೋಮಿಭಾಭಾ ವಿಜ್ಞಾನ ಶಿಕ್ಷಣ ಕೇಂದ್ರದಲ್ಲಿ, ಸ್ಥಳೀಯ ನಿವಾಸಿಗಳಿಗಾಗಿ ಒಂದು ಮುಕ್ತ ಸಭೆ ನಡೆಸಲಾಯಿತು. ಇದರಲ್ಲಿ ಸುಮಾರು 120 ಜನ ಪಾಲ್ಗೊಂಡಿದ್ದರು. ಸೋದರಿ ಧಾರೇಶ್ವರ್‌ರವರು ಎಸ್.ಆರ್.ಸಿ.ಎಂ. ಮತ್ತು ಸಹಜ ಮಾರ್ಗದ ಧ್ಯಾನ ಪದ್ಧತಿ ಕುರಿತು ನೀಡಿದ ಕಿರುಪರಿಚಯದೊಂದಿಗೆ ಕಾರ್ಯಕ್ರಮ ಆರಂಭವಾಯಿತು. 'ಸಹಜ ಮಾರ್ಗ– ಆತ್ಮಾನ್ವೇಷಣೆಯ ವಿಜ್ಞಾನ' ಇದು ಸಂಜೆ ಚರ್ಚಿಸಲಾದ ವಿಷಯ.

ನಮ್ಮ ಜೀವನದ ಲೌಕಿಕ ಹಾಗು ಆಧ್ಯಾತ್ಮಿಕ ಕ್ಷೇತ್ರಗಳ ನಡುವೆ ಸಮತೋಲನ ಕಂಡುಕೊಳ್ಳುವ ಸಲುವಾಗಿ ಧ್ಯಾನ ಮಾಡುವ ಅವಶ್ಯಕತೆಯನ್ನು ಸಂಸ್ಥೆಯ ಜಂಟಿ ಕಾರ್ಯದರ್ಶಿಗಳಾದ ಸೋ. ಎ.ಪಿ. ದುರೈಯವರು ವಿಸ್ತಾರವಾಗಿ ವಿವರಿಸಿದರು.

ಆನಂತರ ಸೋ. ಭಾಟಿಯಾ, ತಾವು ಹೇಗೆ ಸಹಜ ಮಾರ್ಗಕ್ಕೆ ಬಂದರು ಮತ್ತು ತಮ್ಮ ಜೀವನದಲ್ಲಿ ಅದು ಹೇಗೆ ಪರಿವರ್ತನೆ ಮೂಡಿಸಿತೆನ್ನುವುದರ ಬಗ್ಗೆ ಅನುಭವ ಹಂಚಿಕೊಂಡರು. ಇದಾದ ಮೇಲೆ ಕ್ಲುಪ್ತವಾಗಿ ಪ್ರಶ್ನೋತ್ತರ ಅಧಿವೇಶನ ನಡೆಯಿತು. ಕೆಲ ಸಭಿಕರು ವ್ಯಕ್ತಿಗಳ ನಡುವಣ ಸಮಸ್ಯೆಗಳು, ಆರೋಗ್ಯ ಸಮಸ್ಯೆಗಳ ಮುಂತಾದ ವಿಷಯಗಳಲ್ಲಿ ಸಹಜಮಾರ್ಗ ಪರಿಹಾರ ನೀಡುವುದೆ ಎಂದು ತಿಳಿಯಲಪೇಕ್ಷಿಸಿದರು.

ಅಂತ್ಯದಲ್ಲಿ 'ದಿಢೀರ್ ಮುಕ್ತಿ' ಎಂಬ ಶೀರ್ಷಿಕೆಯುಳ್ಳ ಗುರುಗಳ ಉಪನ್ಯಾಸದ ವೀಡಿಯೊ ಪ್ರದರ್ಶಿಸಲಾಯಿತು. ಸಭಿಕರ ಮೇಲೆ ಅದು ಬೀರಿದ ಪ್ರಭಾವ ವ್ಯಕ್ತವಾಗುತ್ತಿತ್ತು. ನೆರೆದಿದ್ದವರಲ್ಲಿ ಇಪ್ಪತ್ತೆರಡು ಜನ ಆರಂಭಿಕ ಬೈಠಕ ಪಡೆದು ಧ್ಯಾನಾಭ್ಯಾಸ ಶುರು ಮಾಡಿದರು.

ಶ್ರೀ ರಾಮಚಂದ್ರ ಮಿಷನ್®
ಎಖೋಸ್ ಇಂಡಿಯಾ ವಾರ್ತಾಪತ್ರ
ಜನವರಿ 2010
ಸಂಪುಟ 3 ಸಂಚಿಕೆ 1


ಜೈಪುರ



ಭೋಪಾಲ್


ಇಂದೂರು

## ಅಭ್ಯಾಸಿ ತರಬೇತಿ ಕಾರ್ಯಕ್ರಮ(ಅ.ತ.ಕಾ)

**ಜೈಪುರ** ಕೇಂದ್ರ ನವೆಂಬರ್ 22, 2009 ರಂದು ಹೊಸ ಅಭ್ಯಾಸಿಗಳಿಗಾಗಿ ಅರ್ಧ ದಿನದ ತರಬೇತಿ ಕಾರ್ಯಕ್ರಮ ನಡೆಸಿತು. ಸಾಧನೆಗೆ ಸಂಬಂಧಿಸಿದಂತೆ ಅನೇಕ ವಿಷಯಗಳ ಮೇಲೆ ಭಾಷಣಗಳು ಮತ್ತು ಪ್ರಶ್ನೋತ್ತರ ಅಧಿವೇಶನಗಳಿದ್ದವು. ಕಾರ್ಯಕ್ರಮದಲ್ಲಿ ಸುಮಾರು ಮೂವತ್ತು ಹೊಸ ಅಭ್ಯಾಸಿಗಳು ಭಾಗವಹಿಸಿದ್ದು, ಇದು ತುಂಬ ಪ್ರಯೋಜನಕಾರಿಯಾಗಿತ್ತು ಮತ್ತು ಮಿಷನ್ ಹಾಗು ಅದರ ವಿವಿಧ ಚಟುವಟಿಕೆಗಳ ಬಗ್ಗೆ ಮಾಹಿತಿ ಪಡೆಯಲು ಹೊಸ ಅಭ್ಯಾಸಿಗಳು ಇಂತಹ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕೆಂಬುದು ಅವರ ಅಭಿಪ್ರಾಯ.

**ಭೋಪಾಲ್** ಆಶ್ರಮದಲ್ಲಿ ನವೆಂಬರ್ 27ರಿಂದ 29ರವರೆಗೆ ಒಂದು ನಿವಾಸಿ ಅ.ತ.ಕಾ ಹಮ್ಮಿಕೊಳ್ಳಲಾಗಿತ್ತು. ಆಶ್ರಮದ ಪ್ರಶಾಂತ ಪರಿಸರದಲ್ಲಿ ನಡೆಸಲಾದ ಈ ಕಾರ್ಯಕ್ರಮದಲ್ಲಿ ಸುಮಾರು ಐವತ್ತು ಅಭ್ಯಾಸಿಗಳು ಭಾಗವಹಿಸಿದ್ದರು. ಶಿಕ್ಷಕರು ನಡೆಸಿಕೊಟ್ಟ ಪ್ರಶ್ನೋತ್ತರ ಮತ್ತು ಇತರ ಪ್ರಸ್ತುತಿಗಳು ಸಾಧನೆಗೆ ಸಂಬಂಧಿಸಿದಂತೆ ಅಭ್ಯಾಸಿಗಳ ಅನೇಕ ಸಂದೇಹಗಳಿಗೆ ಪರಿಹಾರ ನೀಡಿದವು. ವಾತಾವರಣದಲ್ಲಿ ಭ್ರಾತೃತ್ವ ಹಾಗು ಸಾಮರಸ್ಯಗಳು ತುಂಬಿದ್ದು, ಸಹಭಾಗಿಗಳು ತಮ್ಮ ಸಾಧನೆಯನ್ನು ನಿಯಮಿತವಾಗಿ ಮಾಡುವ ದೃಢ ನಿರ್ಧಾರದಿಂದ ಹಿಂದಿರುಗಿದರು.

ನವೆಂಬರ್ 29, 2009 ರಂದು **ರಾಂಚಿ** ಕೇಂದ್ರವು ಕಳೆದ ಒಂದು ವರ್ಷದಲ್ಲಿ ಮಿಷನ್ನಿಗೆ ಸೇರಿದ ಎಲ್ಲ ಅಭ್ಯಾಸಿಗಳಿಗಾಗಿ ಪ್ರಪ್ರಥಮ ಅ.ತ.ಕಾ ಆರಂಭಿಸಿತು. ಕಾರ್ಯಕ್ರಮ ನಿರ್ವಹಣೆಯನ್ನು ಸೋ.ತಿವಾರಿಯವರು ಮತ್ತು ತರಬೇತಿಯ ವಿವಿಧ ಭಾಗಗಳ ಪ್ರಸ್ತುತಿಯನ್ನು ಸೋ.ಲಾಲ್, ತನೇಜ, ಸಾಹು, ಮಿಶ್ರ ಹಾಗು ಸೋದರಿ ತಿವಾರಿಯವರು, ಎಸ್.ಎಂ.ಆರ್.ಟಿ.ಐ.ನಿಂದ ನಿರ್ಮಾಣಗೊಂಡ ದೃಶ್ಯ-ಶ್ರವಣ ಸಾಧನಗಳ ನೆರವಿನಿಂದ ನಡೆಸಿಕೊಟ್ಟರು. ದೃಶ್ಯ-ಶ್ರವಣ ಮಾಧ್ಯಮದ ಮೂಲಕ ಲಭ್ಯವಾದ ಗುರುಗಳ ನುಡಿಗಳು, ಮಿಷನ್ನು ಮತ್ತು ಸಾಧನೆಯನ್ನು ಕುರಿತು ವಿವಿಧ ವಿಷಯಗಳ ಬಗ್ಗೆ ಸ್ಪಷ್ಟತೆ ನೀಡಿದುದರಿಂದ, ಅವು ಎಲ್ಲ ಸಹಭಾಗಿಗಳ ಮೆಚ್ಚಿಗೆ ಪಡೆದವು.

ಮಧ್ಯ ಪ್ರದೇಶದ **ಇಂದೂರು** ಕೇಂದ್ರ ಡಿಸೆಂಬರ್ 6, 2009ರಂದು ಅನುಭವವನ್ನು ಹಂಚಿಕೊಳ್ಳುವ ಅಧಿವೇಶನವನ್ನು ಹಮ್ಮಿಕೊಂಡಿತ್ತು. ಇತ್ತೀಚಿನ ದಿನಗಳಲ್ಲಿ ಗುರುಗಳೊಡನೆ ಪ್ರವಾಸ ಮಾಡಿದ ಮತ್ತು ಅನೇಕ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಅಭ್ಯಾಸಿಗಳು ತಮ್ಮ ಅನುಭವವನ್ನು ಎಲ್ಲರೊಡನೆ ಹಂಚಿಕೊಂಡರು. ಬೆಂಗಳೂರಿನ ಕ್ರೆಸ್ಟ್‌ನಲ್ಲಿ ಒಂದು ತರಬೇತಿಯಲ್ಲಿ ಪಾಲ್ಗೊಂಡ ಸೋ. ಆಪ್ಟೆಯವರು ಅದರ ಬಗ್ಗೆ ದೀರ್ಘ ಮಾಹಿತಿಯನ್ನು ನೀಡಿ, ಅಭ್ಯಾಸಿಗಳು ಅದರಲ್ಲಿ ಭಾಗವಹಿಸುವಂತೆ ಪ್ರೇರೇಪಿಸಿದರು. ಗುರುಗಳ ಗ್ಯಾಂಗ್‌ಟಾಕಿನ ಪ್ರವಾಸದಲ್ಲಿ ಜೊತೆಗಿದ್ದ ಸುದ್ಯೈವಿ ಸೋ.ಮುಂಡ್ರ ತಮ್ಮ ಪ್ರವಾಸ ಕಾಲದ ಸುಂದರ ಭಾವಚಿತ್ರಗಳನ್ನು ಪ್ರದರ್ಶಿಸಿದರು. ಆ ಸ್ಥಳಗಳಿಗೆ ಭೇಟಿ ನೀಡಲು ಗುರುಗಳು ಎಷ್ಟು ಉತ್ಸುಕ ಹಾಗು ಕಾತುರರಾಗಿದ್ದರೆಂಬುದನ್ನು ವಿವರಿಸಿದರು. ಅವರು ಅಲ್ಲಿ ನಡೆದ ವಿನೋದ ಪ್ರಸಂಗಗಳು ಮತ್ತು ಅದರಲ್ಲಡಗಿದ್ದ ಗುರುಗಳ ಅರ್ಥಗರ್ಭಿತ ಮಾತುಕತೆಗಳನ್ನು ಸಹ ಹಂಚಿಕೊಂಡರು. ಕ್ರೆಸ್ಟ್, ಖರಗಪುರದಲ್ಲಿ ಗುರುಗಳೊಡನಿರುವ ಅವಕಾಶ ಪಡೆದ ಸೋ. ರಾವೆರ್ಕರ್, ಗುರುಗಳು ನೀಡಿದ ಉಪನ್ಯಾಸಗಳ ಮುಖ್ಯಾಂಶಗಳನ್ನು ನಿರೂಪಿಸಿದರು. ಈ ವಿವಿಧ ಅನುಭವಗಳನ್ನು ಕೇಳುವಾಗ ಅಭ್ಯಾಸಿಗಳ ಅಂತರಂಗದಲ್ಲಿ ಆನಂದ ತುಂಬಿದುದು ಕಂಡುಬಂತು.

ನವೆಂಬರ್ 15ರಂದು ಗುಜರಾತಿನ **ಭುಜ್** ಕೇಂದ್ರದಲ್ಲಿ ನಡೆಸಿದ ಅರ್ಧ ದಿನದ ತರಬೇತಿ ಕಾರ್ಯಕ್ರಮದಲ್ಲಿ ಸುಮಾರು 21 ಅಭ್ಯಾಸಿಗಳು ಪಾಲ್ಗೊಂಡಿದ್ದರು. ಸಾಧನೆಗೆ ಸಂಬಂಧಪಟ್ಟಂತೆ ವಿವಿಧ ವಿಷಯಗಳನ್ನೊಳಗೊಂಡ ಭಾಷಣಗಳಿದ್ದ ಈ ಕಾರ್ಯಕ್ರಮದಲ್ಲಿ ಅಭ್ಯಾಸವನ್ನು ಬಿಟ್ಟುಕೊಟ್ಟಿದ್ದ ಕೆಲವರೂ ಇದ್ದರು. ಸತ್ಸಂಗದ ಮಹಿಮೆ ಎತ್ತಿ ತೋರುವ ನಾರದರ ಮೇಲಿನ ಒಂದು ಪ್ರಹಸನವನ್ನು ಅಭ್ಯಾಸಿಗಳು ಅಭಿನಯಿಸಿದರು. ಅಭ್ಯಾಸಿಗಳೆಲ್ಲರೂ ತಮ್ಮ ಸಂದೇಹಗಳನ್ನು ನಿವಾರಿಸಿಕೊಂಡು ಉತ್ಸಾಹದಿಂದ ತೆರಳಿದರು.

**ವಡೋದರ** ಕೇಂದ್ರ ಒಂದೂವರೆ ದಿನಗಳ ಯುವಜನರ ಕಮ್ಮಟವೊಂದನ್ನು ನವೆಂಬರ್ 14 ಮತ್ತು 15 ರಂದು ಸಂಯೋಜಿಸಿತ್ತು. ಸುಮಾರು ಮೂವತ್ತೈದು ಅಭ್ಯಾಸಿಗಳು ಭಾಗವಹಿಸಿದ ಈ ಸಂಕಿರಣದಲ್ಲಿ ಐದು ಅಧಿವೇಶನಗಳಿದ್ದವು. ಇವು ಯುವ ಜನರು ಸಹಜ ಮಾರ್ಗ ಸಾಧನೆಯ ಬಗ್ಗೆ ಹೆಚ್ಚಿನ ಅರಿವು ಮೂಡಿಸಿಕೊಳ್ಳಲು, ಮಿಷನ್ನಿನಲ್ಲಿ ತಮ್ಮ ಪಾತ್ರದ ಬಗ್ಗೆ ಅರಿತುಕೊಳ್ಳಲು ಮತ್ತು ಎಲ್ಲರೊಡನೆ ತಮ್ಮ ಸೋದರಭಾವವನ್ನು ಬಲಗೊಳಿಸಲು ನೆರವಾದವು. ಕಾರ್ಯಕ್ರಮದ ಸಹಭಾಗಿಗಳು, ಸಂಕಿರಣವು ಕಲಿಕೆಯಿಂದ ಕೂಡಿದ್ದು ಬಹಳ ಪ್ರಯೋಜನಕಾರಿಯಾಯಿತೆಂಬುದನ್ನು ಕಂಡುಕೊಂಡರು.

ನವೆಂಬರ್ 15, 2009 ರಂದು **ದಾವಣಗೆರೆ** ಕೇಂದ್ರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಚಿತ್ರದುರ್ಗ, ಕರೂರು, ಹರಿಹರ, ಭದ್ರಾವತಿಯಿಂದ ಸುಮಾರು ಎಪ್ಪತ್ತು ಅಭ್ಯಾಸಿಗಳು ಪಾಲ್ಗೊಂಡಿದ್ದರು.

ಪ್ರಶಿಕ್ಷಕರಾದ ಸೋ.ರಮಣಿ, ನಾಗೇಶ್, ಇಂದಿರಾ ಪ್ರಸಾದ್ ಹಾಗು ಸುಜಾತ ಉಪಸ್ಥಿತರಿದ್ದರು. ಮೊದಲ ಅಧಿವೇಶನದಲ್ಲಿ, ಅಭ್ಯಾಸಿಗಳು ನಾಲ್ಕು ತಂಡಗಳಲ್ಲಿ ಪ್ರತ್ಯೇಕಗೊಂಡು ತಮಗೆ ನೀಡಲಾದ ವಿಷಯಗಳನ್ನು ಚರ್ಚಿಸಿದರು. ಪ್ರತಿಯೊಂದು ತಂಡದ ಮುಂದಾಳುಗಳು, ಚರ್ಚಿಸಿದ ಅಂಶಗಳನ್ನು ಮಂಡಿಸಿದರು. ಈ ವಿಷಯಗಳನ್ನು ಕುರಿತಂತೆ ಕೆಲ ಅಭ್ಯಾಸಿಗಳಿಗೆ ಮೂಡಿದ ಪ್ರಶ್ನೆಗಳನ್ನು ಪ್ರಶಿಕ್ಷಕರು ಉತ್ತರಿಸಿ ಸ್ಪಷ್ಟ ವಿವರಣೆ ನೀಡಿದರು.

ಎರಡನೇ ಅಧಿವೇಶನದಲ್ಲಿ ಸೋ.ಬಿ.ಶ್ರೀನಿವಾಸರು ಆಧ್ಯಾತ್ಮಿಕ ಪಥದಲ್ಲಿ ಹೇಗೆ ಗುರುಗಳು ಪ್ರಮುಖ ಪಾತ್ರವಹಿಸುವರು ಮತ್ತು ನಾವು ಹೇಗೆ ಗುರುವಿನೊಡನೆ ಸಹಕರಿಸಬೇಕೆಂಬುದನ್ನು ತಿಳಿಸಿಕೊಟ್ಟರು.

ಅಭ್ಯಾಸಿಗಳ ನಡತೆ ಮತ್ತು ಮನೋಭಾವಗಳನ್ನು ವ್ಯಕ್ತಗೊಳಿಸುವ ಒಂದು ನಾಟಕವನ್ನು ಮಕ್ಕಳು ನಡೆಸಿಕೊಟ್ಟರು. ಕಾರ್ಯಕ್ರಮ ಪ್ರತಿಯೊಬ್ಬ ಅಭ್ಯಾಸಿಯ ದೃಷ್ಟಿಯಿಂದ ಮಾಹಿತಿಪೂರ್ಣವಾಗಿದ್ದು, ಅಲ್ಲಿ ಸಂತೋಷಭರಿತ ವಾತಾವರಣ ಮೂಡಿತ್ತು.

ರಾಂಚಿ


ಭುಜ್


ದಾವಣಗೆರೆ


## ಮೌಲ್ಯಾಧಾರಿತ ಆಧ್ಯಾತ್ಮಿಕ ಶಿಕ್ಷಣ ಕಾರ್ಯಕ್ರಮಗಳು (ಮೌ.ಆ.ಶಿ)

### ಹೌಶಂಗಾಬಾದ್



ಹೌಶಂಗಾಬಾದ್‌ನ ಸೇವಾ ಶಾಲೆಯಲ್ಲಿ ಒಂದು ಕಾಲಾವಧಿಯನ್ನು ಮೌ.ಆ.ಶಿ ಪಠ್ಯಕ್ರಮದ ಪ್ರಕಾರ ಮೌಲ್ಯಗಳ ಶಿಕ್ಷಣಕ್ಕಾಗಿ ಮೀಸಲಾಗಿಡಲಾಗಿದೆ ಮತ್ತು ಇದು ಕಳೆದ ಎರಡು ವರ್ಷಗಳಿಂದ ನಡೆದುಬರುತ್ತಿದೆ. ಈ ವರ್ಷದ ವಾರ್ಷಿಕ ಉತ್ಸವವನ್ನು ಆಯೋಜಿಸುವಾಗ ಶಾಲೆಯ ವ್ಯವಸ್ಥಾಪಕ ವರ್ಗದವರು ಮೌಲ್ಯಗಳನ್ನು ಕೇಂದ್ರಬಿಂದುವಾಗಿಡಲು ತೀರ್ಮಾನಿಸಲು, ಇದಕ್ಕಾಗಿ ನಮ್ಮ ಮೌ.ಆ.ಶಿ ಸಂಚಾಲಕರ ನೆರವು ಬಯಸಿದರು. ಸ್ವಯಂಸೇವಕ ತಂಡ 'ಸಂತೋಷ' ಎಂಬ ವಿಷಯವನ್ನು ಆರಿಸಿಕೊಂಡು, ವಿದ್ಯಾರ್ಥಿಗೊಳಗೂಡಿ ಈ ಮೌಲ್ಯದ ವಿವಿಧ ಮುಖಗಳನ್ನು ಕುರಿತಂತೆ ಒಂದು ಕಿರುನಾಟಕ, ಗೀತೆಗಳು ಮತ್ತು ನೃತ್ಯಗಳನ್ನು ಸಿದ್ಧಗೊಳಿಸಿತು. ಕಾರ್ಯಕ್ರಮ ದಲ್ಲಿ ವಿದ್ಯಾರ್ಥಿಗಳ ತಂದೆತಾಯಿಯರೂ ಸಹ ಉಪಸ್ಥಿತರಿದ್ದರಿಂದ, ಸಂದೇಶವು ಬಹಳಷ್ಟು ಜನರನ್ನು ಮುಟ್ಟಿತು.

ಶಾಲೆಯು ಮೌಲ್ಯ ಶಿಕ್ಷಣದ ಮೂಲಕ ಹೆಚ್ಚು ಹೆಚ್ಚು ತಂದೆ ತಾಯಿಯರನ್ನು ಆಕರ್ಷಿಸುತ್ತಿದೆ ಮತ್ತು ಈ ವಿಧದಲ್ಲಿ ನಮ್ಮ ಪ್ರೀತಿಯ ಗುರುಗಳಿಗೆ ವಿನಮ್ರತೆಯಿಂದ ಸೇವೆ ಸಲ್ಲಿಸುತ್ತಿದೆ.

### ಉರ್ಸುಲೈನ್ ಕಾನ್ವೆಂಟ್



2009 ನವೆಂಬರ್ 5 ರಂದು, 900ಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳು ಒಂದು ಗಂಟೆ ಅವಧಿಯ ಅಧಿವೇಶನದಲ್ಲಿ ಪಾಲ್ಗೊಂಡಿದ್ದರು. ಇದರಲ್ಲಿ ಸಮಯದ ಮೌಲ್ಯ, ಕಾಲ ನಿರ್ವಹಣೆ ಮತ್ತು ಮಾನವ ಜೀವನದ ಉದ್ದೇಶದಂತಹ ವಿಷಯಗಳನ್ನು ಪ್ರಸ್ತುತ ಪಡಿಸಲಾಯಿತು. ಮಿಷನ್ನಿನ ಪ್ರಾರ್ಥನೆಯನ್ನು ಮಕ್ಕಳಿಗೆ ಕಲಿಸಿಕೊಡಲಾಯಿತು.

ಮನಸ್ಸಿನಲ್ಲಿ ಸಂಸ್ಕಾರಗಳುಂಟಾಗದಿರಲು, ತಮ್ಮ ಕೆಲಸ ಮಾಡಿ ಮರೆತು ಬಿಡಬೇಕೆಂದು ಮಕ್ಕಳಿಗೆ ತಿಳಿಸಲಾಯಿತು. ನಾವು ಹೇಗೆ ಒಳ್ಳೆಯ ಹಾಗು ಕೆಟ್ಟ ಚಟಗಳನ್ನು ಬೆಳೆಸಿಕೊಳ್ಳುತ್ತೇವೆ ಮತ್ತು ಹೇಗೆ ಅವುಗಳ ಬಂಧನಕ್ಕೊಳಗಾಗುತ್ತೇವೆ ಎಂಬುದನ್ನು ಮನಮುಟ್ಟಿಸಲು ಪ್ರಯೋಗ ಹಾಗು ನಿದರ್ಶನಗಳನ್ನು ಮಾಡಿ ತೋರಿಸಲಾಯಿತು.

ಸೋ. ಅರುಣಕುಮಾರರು ನಾಲ್ಕು ದಿನಗಳನ್ನು ಬಳಸಿ ಸಮಯ ಮತ್ತು ಕಾರ್ಯದ ನಿರ್ವಹಣೆಯನ್ನು ಉತ್ತಮವಾಗಿ ಮಾಡುವ ವಿಧಾನವನ್ನು ತೋರಿಸಿಕೊಟ್ಟರು. ವಿದ್ಯಾರ್ಥಿಗಳು ತಮ್ಮ ಕೆಲಸಗಳನ್ನು ವಿವಿಧ ಕುಕ್ಕೆಗಳಲ್ಲಿ ವಿಂಗಡಿಸುವಂತೆ ಸಲಹೆ ನೀಡಿದರು. ಮೊದಲು ಇತರರಿಗೆ ವಹಿಸಿಕೊಡುವ ಕೆಲಸಗಳು, ನಂತರ ನಿಧಾನ ಮಾಡುವಂತಹ ಕೆಲಸಗಳು, ಅನಂತರ ಮಾಡಬೇಕಿಲ್ಲದ ಕೆಲಸಗಳು, ಕೊನೆಗೆ ಮಾಡಬೇಕಾದ ತಡ ಮಾಡದೆ ಈಗಲೇ ಮಾಡಬೇಕಾದ ಕೆಲಸಗಳು.

ಶಾಲೆಯ ವ್ಯವಸ್ಥಾಪಕ ವರ್ಗದವರಿಗೆ ಮತ್ತು ಮಕ್ಕಳಿಗೆ ಈ ಕಾರ್ಯಕ್ರಮ ಮೆಚ್ಚುಗೆಯಾಯಿತೆಂಬುದು, ಮುಕ್ತಾಯದ ಅಧಿವೇಶನದಲ್ಲಿ ಅವರು ಕೇಳಿದ ಪ್ರಶ್ನೆಗಳಿಂದ ಸ್ಪಷ್ಟವಾಗಿತ್ತು.

### ಫ಼ರಕ್ಕಾ, ಪಶ್ಚಿಮ ಬಂಗಾಳ

ಮೌ.ಆ.ಶಿ. ಕಾರ್ಯಕ್ರಮ ಸೋ. ವಿಜಯಕುಮಾರ ಮತ್ತು ಫ಼ರಕ್ಕಾದ ಡಿ.ಪಿ.ಎಸ್ ನ ಪ್ರಾಂಶುಪಾಲರಾದ ಸೋ. ಸುಬ್ರಹ್ಮಣ್ಯ ಕುಮಾರರಿಂದ ಸಂಘಟವಾಗಿತ್ತು.

ಕಾರ್ಯಕ್ರಮ ಎರಡು ದಿನ ನಡೆದು, ಡಿಸೆಂಬರ್ 11 ರಂದು ಮೊದಲ ಅಧಿವೇಶನದಲ್ಲಿ 6,7,8 ತರಗತಿಯ 300 ಮಕ್ಕಳು ಮತ್ತು ಎರಡನೇ ಅಧಿವೇಶನದಲ್ಲಿ 9.10,11 ತರಗತಿಯ 200 ಮಕ್ಕಳು ಭಾಗವಹಿಸಿದ್ದರು. ಡಿಸೆಂಬರ್ 12ರಂದು ಫ಼ರಕ್ಕಾದ ಕೆಲವು ಶಾಲೆಗಳಿಂದ ಬಂದ 57 ಶಿಕ್ಷಕರು ಮತ್ತು ಮೂರು ಪ್ರಾಂಶುಪಾಲರು ಪಾಲ್ಗೊಂಡಿದ್ದರು.

ಮಕ್ಕಳಿಗೆ ಅನೇಕ ಕಥೆ ಮತ್ತು ಪ್ರಯೋಗಗಳ ಮೂಲಕ ಮೌಲ್ಯಗಳನ್ನು ಪರಿಚಯಿಸಲಾಯಿತು. ಮಕ್ಕಳು ಮತ್ತು ಶಿಕ್ಷಕರು ಪ್ರಯೋಗಗಳನ್ನು ಚೆನ್ನಾಗಿ ಅರ್ಥೈಸಿ ಮೆಚ್ಚಿಕೊಂಡರು. ಕೊನೆಯಲ್ಲಿ ಮಕ್ಕಳಿಗೆ ತಾವು ಶಿಕ್ಷಕರೆಂದು ಕಲ್ಪಿಸಿಕೊಂಡು ತಮ್ಮಿಂದ ವಿದ್ಯಾರ್ಥಿಗಳ ನಿರೀಕ್ಷೆಗಳೇನು, ಮತ್ತು ವಿದ್ಯಾರ್ಥಿಗಳಾಗಿ ತಮ್ಮಿಂದ ಶಿಕ್ಷಕರ ನಿರೀಕ್ಷೆಗಳೇನೆಂಬುದನ್ನು ಬರೆದಿಟ್ಟುಕೊಳ್ಳಲು ತಿಳಿಸಲಾಯಿತು.

ಮರುದಿನ ನಡೆದ ಶಿಕ್ಷಕರ ಕಾರ್ಯಕ್ರಮದಲ್ಲಿ ಈ ಪ್ರತಿಕ್ರಿಯೆಗಳನ್ನು ಪರಿಣಾಮಕಾರಿಯಾಗಿ ಮಂಡಿಸಲಾಯಿತು. ಶಿಕ್ಷಕರು, ನಿಜಕ್ಕೂ ತಾವು ಮಕ್ಕಳಲ್ಲಿರುವ ಜ್ಞಾನಸಂಪತ್ತನ್ನು ಹೊರತೆಗೆಯಲು ಪ್ರಯತ್ನಿಸುತ್ತಿರುವರೇ ಅಥವಾ ತಾವು ಕೇವಲ ಸಂಬಳ ಪಡೆಯುವುದರಲ್ಲಷ್ಟೇ ಆಸಕ್ತರೇ, ಪಾಠ ಕಲಿಸಿದ ಎಲ್ಲ ಶಿಕ್ಷಕರನ್ನೂ ನೆನೆಯದೆ ನಾವೇಕೆ ಕೆಲವರನ್ನಷ್ಟೇ ನೆನೆಯುತ್ತೇವೆ, ವಿದ್ಯಾರ್ಥಿಗಳು ಅನುಕರಿಸುವಂತಹ ಆದರ್ಶಗಳು ನಮ್ಮಲ್ಲಿರುವುದೇ ಈ ವಿಷಯಗಳ ಬಗ್ಗೆ ಮನನ ಮಾಡಲೆಂದು ತಿಳಿಸಲಾಯಿತು.

ಎಲ್ಲ ಶಿಕ್ಷಕರೂ ಕಾರ್ಯಕ್ರಮದಿಂದ ಪ್ರಭಾವಿತರಾದುದು ಕಂಡು ಬಂತು. ಅವರಿತ್ತ ಪ್ರತಿಕ್ರಿಯೆಗಳಲ್ಲಿ ಕಾರ್ಯಕ್ರಮವನ್ನು ಮತ್ತೊಮ್ಮೆ ನಡೆಸಬೇಕು, ಧ್ಯಾನದ ಬಗ್ಗೆ ಒಂದು ಅಧಿವೇಶನ ಇರಬೇಕು ಇತ್ಯಾದಿ ಮನವಿಗಳಿದ್ದವು.

### ಹುಬ್ಬಳ್ಳಿ

ನವೆಂಬರ್ 10ರಂದು ಹುಬಳ್ಳಿ ಕೇಂದ್ರದಲ್ಲಿ ಬೆಳಿಗ್ಗೆ ಹತ್ತರಿಂದ ಸಂಜೆ ಐದರ ವರೆಗೆ ಕಾರ್ಯಕ್ರಮ ನಡೆಯಿತು. 41 ಶಿಕ್ಷಕರು ಮತ್ತು 15 ಅಭ್ಯಾಸಿಗಳಿಗೆ ಬೆಂಗಳೂರಿನಿಂದ ಬಂದ ಸೋ. ಮಾಧುರಿ ಮತ್ತು ಸೋ.ಸರೋಜ ಕಾರ್ಯಕ್ರಮ ನಡೆಸಿಕೊಟ್ಟರು.

ಸೋ.ಮಾಧುರಿ ಮೌಲ್ಯಗಳ ಅರ್ಥಗಳನ್ನು ತಿಳಿಸಿದರೆ, ಸೋ.ಅಜಿತ ಕಾಮತರು ಮೌಲ್ಯಗಳ ಅವಶ್ಯಕತೆಯನ್ನು ವಿವರಿಸಿದರು. ವಯಸ್ಸಾದಂತೆ ಗ್ರಹಣಶಕ್ತಿ ಬದಲಾಗುವುದೆಂದು ತಿಳಿಸುತ್ತ, ಹೇಗೆ ಮಕ್ಕಳು 4ರಿಂದ 7 ವಯಸ್ಸಿನವರೆಗೆ ಶಿಕ್ಷಕರು ಹೇಳಿದ್ದನ್ನು ಅನುಸರಿಸುತ್ತಾರೆ ಮತ್ತು ತದನಂತರ ಅವರಲ್ಲಿ ಯೋಗ್ಯತೆ ನಿರ್ಣಯ ಮಾಡುವ ಮನೋಭಾವ ಬೆಳೆಯುತ್ತದೆ ಎಂಬುದನ್ನು ವಿವರಿಸಿದರು. ಶಿಕ್ಷಕರು ತರಬೇತಿ ಪ್ರವೇಶ ಮಾಡುವಾಗ ಅವರು ಭೌತಿಕ, ಮಾನಸಿಕ ಹಾಗು ಭಾವನಾತ್ಮಕ ಎಂಬ ಮೂರು ವ್ಯಕ್ತಿತ್ವಗಳೊಡನೆ ಪ್ರವೇಶಿಸುತ್ತಾರೆ. ಮಗುವೂ ಸಹ ಹಾಗೆಯೇ ಮಾಡುತ್ತದೆ. ಮಗು ಶಿಕ್ಷಕರ ಮನಸ್ಥಿತಿಯನ್ನು, ಒಬ್ಬ ವಯಸ್ಕನಿಗಿಂತಲೂ ಶೀಘ್ರವಾಗಿ, ಅತಿ ಶೀಘ್ರವಾಗಿ ಓದಬಲ್ಲುದು.

ಹೃದಯಗಳನ್ನು ತೆರೆಯಲು, ಸಹಕಾರ ನೀಡಿಕೆ ಮತ್ತು ಸ್ವೀಕರಿಸುವಿಕೆ ಇತ್ಯಾದಿಗಳನ್ನು ಕಲಿಸಲು ಕೆಲವು ಆಟಗಳನ್ನು ಆಡಿಸಲಾಯಿತು. ತಂಡಗಳ ಚರ್ಚೆಯಲ್ಲಿ ಶಿಕ್ಷಕರಿಗೆ ಕ್ಲಿಪ್, ಕನ್ನಡಿ, ಪೆನ್ನು ಇಂತಹ ಸಾಮಾನುಗಳನ್ನು ನೀಡಿ ಅವುಗಳಲ್ಲಿ ಮೌಲ್ಯಗಳನ್ನು ಕಾಣುವಂತೆ ಹೇಳಲಾಯಿತು. ಚರಿತ್ರೆ ಅಥವಾ ಭೂಗೋಳದಂತಹ ತಮ್ಮ ವಿಷಯಗಳನ್ನು ಮೌಲ್ಯಗಳೊಡನೆ ಸಂಯೋಜಿಸಲು ಶಿಕ್ಷಕರಿಗೆ ತಿಳಿಸಲಾಯಿತು. ಇದನ್ನು ಪ್ರತಿಸ್ಪಂದನವುಳ್ಳ ಅಧಿವೇಶನವನ್ನಾಗಿ ಮಾಡಿದುದರಿಂದ, ಶಿಕ್ಯಕರು ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡರು.

## ಅನುಭವಗಳನ್ನು ಹಂಚಿಕೊಂಡ ಕಾರ್ಯಕ್ರಮ, ಬೆಂಗಳೂರು



2009,ಡಿಸೆಂಬರ್ 20ರಂದು ಪರಂಧಾಮ ಆಶ್ರಮದಲ್ಲಿ ಸತ್ಸಂಗದ ನಂತರ ಒಂದು ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಕಳೆದ ಬಾರಿ ಗುರುಗಳು ಬೆಂಗಳೂರಿಗೆ ನೀಡಿದ ಭೇಟಿಯಿಂದಾದ ಅನುಭವಗಳನ್ನು ಹಾಗೂ ಕಲಿತ ಪಾಠಗಳನ್ನು ಅಭ್ಯಾಸಿಗಳು ಹಂಚಿಕೊಂಡರು. ಈ ಕಾರ್ಯಕ್ರಮದ ಫಲವಾಗಿ ಈ ಕೆಳಕಾಣುವ ಕೆಲವು ಅಂಶಗಳು ಹೊರಬಂದವು.

- ಗುರುಗಳ ಕಾರ್ಯವು ನಡೆಯುವುದು 'ಹೃದಯದಿಂದ ಹೃದಯಕ್ಕೆ'. ಪ್ರತಿಯೊಂದು ಹೃದಯದಲ್ಲಿಯೂ ಏನೇನು ನಡೆಯುತ್ತದೆ ಎಂಬುದು ಅವರಿಗೆ ತಿಳಿದಿರುತ್ತದೆ. ಮತ್ತು ಅದರ ವೇದನೆ, ನೋವುಗಳಿಗೆ ಆ ಕ್ಷಣವೇ ಅವರು ಸ್ಪಂದಿಸುವರು. ನಾವು ಕೇವಲ ನಮ್ಮ ಹೃದಯವನ್ನು ಅವರಿಗಾಗಿ ತೆರೆದಿಟ್ಟರಬೇಕಷ್ಟೇ.
- "ಹೊರನೋಟಕ್ಕೆ ನಾವು ಹೇಗಿರುವೆವೋ, ನಮ್ಮೊಳಗೂ ಹಾಗೆಯೇ ಇರುವುದು ಉತ್ತಮ ಚಾರಿತ್ರ್ಯ"ವೆಂದು ಗುರುಗಳು ಹೇಳಿದ್ದಾರೆ. ಗುರುಗಳನ್ನು ನಾವು ಸರಿಯಾಗಿ ಗಮನಿಸುವ ಮೂಲಕ ಇದನ್ನು ಆಚರಣೆಗೆ ತರುವುದು ಹೇಗೆಂದು ಕಲಿಯುತ್ತೇವೆ.
- ಗುರುಗಳ ಪ್ರತಿಯೊಂದು ಭೇಟಿಯೂ ನಮ್ಮಲ್ಲಿ ಸಹನಶೀಲತೆಯನ್ನು ಹಾಗೂ ನಿರೀಕ್ಷಣೆ ಮಾಡುವುದನ್ನು ಕಲಿಯಲು ಅವಕಾಶವಾಗಿದೆ. ಹಾಗೆಯೇ ಗುರುಗಳ ಭೇಟಿಯು ನಾವು ಅವರಿಗಾಗಿ ವಿವಿಧ ಹಂತಗಳಲ್ಲಿ ಹೇಗೆ ಕಾಯಬೇಕೆಂಬುದನ್ನು ಕಲಿಯಲು ಒಂದು ತರಬೇತಿಯ ಮೈದಾನದಂತಿರುತ್ತದೆ.
- ಯಾವುದೇ ಒಂದು ಕೇಂದ್ರಕ್ಕೆ ಗುರುಗಳ ಭೇಟಿಯು ನಮ್ಮ ಆಧ್ಯಾತ್ಮಿಕ ಸಾಧನೆಯಲ್ಲಿ ಇನ್ನೂ ಹೆಚ್ಚಿನ ಪ್ರಗತಿಹೊಂದಲು ಸದವಕಾಶವಾಗಿರುತ್ತದೆ. ಆದುದರಿಂದ ಅವರ ಆಗಮನಕ್ಕೆ ಮೊದಲೇ ನಮ್ಮನ್ನು ನಾವು ಸರಿಯಾಗಿ ಸಿದ್ಧಪಡಿಸಿಕೊಂಡು ಇದನ್ನು ಹೆಚ್ಚಾಗಿಸಬೇಕು.

ಅನೇಕ ಅನುಭವಗಳನ್ನು ಪದಗಳಲ್ಲಿ ವರ್ಣಿಸಲಾಗುವುದಿಲ್ಲ. ಇವನ್ನು ನಾವು ನಮ್ಮ ಹೃದಯಾಂತರಾಳದಲ್ಲಿ ಸಂತೈಸಬೇಕು ಮತ್ತು ಇವು ನಮ್ಮಲ್ಲಿ ಗುರುಗಳ ಬಗೆಗಿನ ಪ್ರೇಮ ಮತ್ತು ಕೃತಜ್ಞತೆಯ ಭಾವವಾಗಿ ಪರಿಣಮಿಸಬೇಕು.

## ಕೋಲ್ಕತ್ತಾ ಆಶ್ರಮದ ವಾರ್ಷಿಕೋತ್ಸವ ಸಮಾರಂಭ

ಕೋಲ್ಕತ್ತಾ ಆಶ್ರಮದ 6ನೇ ವಾರ್ಷಿಕೋತ್ಸವವನ್ನು ಆಚರಿಸುವುದಕ್ಕಾಗಿ ಡಿಸೆಂಬರ್ 25ರಂದು ಮಕ್ಕಳಿಗಾಗಿ ಹಾಗೂ ಅಭ್ಯಾಸಿಗಳಿಗಾಗಿ ಒಂದು ಕ್ರೀಡೆಯನ್ನು ಏರ್ಪಡಿಸಲಾಗಿತ್ತು. ಸಹೋದರಿಯರಾದ ಜೈನ್ ಹಾಗೂ ಕೊಠಾರಿಯವರು ನಡೆಸಿಕೊಟ್ಟ ಈ ಆಟದಲ್ಲಿ ಎಲ್ಲಾ ವಯೋಮಾನದ 100ಕ್ಕಿಂತ ಹೆಚ್ಚು ಜನರು ಭಾಗವಹಿಸಿದ್ದರು.



3ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಅಪ್ಪಿಕೊಳ್ಳುವ ಒಂದು ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಇದರಲ್ಲಿ ಮಕ್ಕಳು ಓಡಿಹೋಗಿ ತಮ್ಮ ಪೋಷಕರನ್ನು ಅಪ್ಪಿಕೊಂಡರು. ಒಂದು ಬಟ್ಟಲಿನಲ್ಲಿ ಇಟ್ಟಿದ್ದ ಬೇಳೆ ಮತ್ತು ರಾಜ್ಮಾಗಳನ್ನು ಬೇರ್ಪಡಿಸುವ ಆಟವನ್ನು ವಯಸ್ಕಾದವರು ಆಡಿದರು. ಅಭ್ಯಾಸಿಗಳು ಆಶ್ರಮಕ್ಕೆ ಬರಲು ಮಕ್ಕಳು ಪ್ರೇರಣಾ ಶಕ್ತಿಯಾದದ್ದು ಕಾರ್ಯಕ್ರಮದ ಅತಿಮುಖ್ಯವಾದ ಅಂಶವಾಗಿತ್ತು.

## ಆಂತರಿಕ ಪರಿಶೋಧನೆ ಹಾಗೂ ಪ್ರತಿಫಲನ, ಇಂದೋರ್

ಡಿಸೆಂಬರ್ 18ರಿಂದ 22ರವರೆಗೆ 8 ಅಭ್ಯಾಸಿಗಳು ಆಶ್ರಮದ ಪ್ರಶಾಂತ ವಾತಾವರಣದಲ್ಲಿ 5 ದಿನಗಳಕಾಲ ತಂಗಿದ್ದರು. ತಮ್ಮ ಅಂತರಾಳವನ್ನು ನೋಡಿಕೊಳ್ಳುವುದು ಹಾಗೂ ನಮ್ಮ ಗುರುಗಳೆಡೆಗೆ ನಿಜವಾದ ರೀತಿಯಲ್ಲಿ ಮುನ್ನಡೆಯುವುದು ಈ ಕಾರ್ಯಕ್ರಮದ ಮುಖ್ಯ ಧ್ಯೇಯವಾಗಿತ್ತು.

ಇದರಲ್ಲಿ ಭಾಷಣಗಳಿರಲಿಲ್ಲ, ಸಂಭಾಷಣೆಯಿರಲಿಲ್ಲ ಏಕೆಂದರೆ ಅವರವರ ಸಾಧನೆ, ಸ್ವ ಅವಲೋಕನ, ದಿನಚರಿ ಬರೆಯುವುದು. ಪುಸ್ತಕಗಳನ್ನು ಓದುವುದು ಮತ್ತು ಧ್ಯಾನ ಇವುಗಳ ಕಡೆಗೆ ಭಾಗವಹಿಸಿದವರು ತೀವ್ರವಾದ ಗಮನಹರಿಸುವಂತೆ ಕೋರಿಕೊಳ್ಳಲಾಗಿತ್ತು.

ಸಹೋದರ ಎನ್.ವಿ.ದೇಶಪಾಂಡೆಯವರು ಕೆಲವು ಪ್ರೋತ್ಸಾಹದ ಮಾತುಗಳನ್ನಾಡಿದರು. ಪ್ರತಿ ದಿನ ಬೆಳಗ್ಗೆ ಮತ್ತು ಸಂಜೆ ಒಬ್ಬ ಪ್ರಶಿಕ್ಷಕರು ಅಭ್ಯಾಸಿಗಳು ವೈಯಕ್ತಿಕ ಬೈಠಕ್ ತೆಗೆದುಕೊಳ್ಳಲು ಸಹಾಯವಾಗಲೆಂದು ಭೇಟಿನೀಡುತ್ತಿದ್ದರು.

ಅಭ್ಯಾಸಿಗಳು ಪುನಶ್ಚೇತನಗೊಂಡವರಂತೆ ಅನುಭವಿಸಿದರು. ಆಂತರಿಕ ಶಾಂತಿಯನ್ನು ಅನುಭವಿಸಿದರು ಮತ್ತು ಗುರಿಯತ್ತ ಬಲವಾದ ಸಂಕಲ್ಪವುಳ್ಳವರಾಗಿ ಪ್ರಾಪಂಚಿಕ ಜೀವನವನ್ನು ಪುನಃಪ್ರವೇಶಿಸಿದರು. ಈ ಕಾರ್ಯಕ್ರಮವು ಸಹೋದರರಾದ ಅವಿನಾಶ್ ಕಮಾರ್‌ಕರ್ ಹಾಗೂ ರಾಜೇಶ್ ಠಾವೇರ್‌ಕರ್ ಅವರಿಂದ ಆಯೋಜಿಸಲ್ಪಟ್ಟಿತ್ತು. ವಲಯ ಮಟ್ಟದಲ್ಲಿ ಈ ಕಾರ್ಯಕ್ರಮವನ್ನು ನಡೆಸುವ ಯೋಜನೆಯಾಗಿದೆ.

## ಮಹಾರಾಷ್ಟ್ರ ಯುವಜನ ಸಭೆ – ಪುಣೆ



47ಜನರ ಒಂದು ಸಮೂಹವು ಡಿಸೆಂಬರ್ 18ರಿಂದ 20ರವರೆಗೆ ಜರುಗಿದ ಯುವಜನ ಸಭೆಯಲ್ಲಿ ಭಾಗವಹಿಸಿತು.

ಔಪಚಾರಿಕ ಚರ್ಚೆಗಳನ್ನು ಹೊರತುಪಡಿಸಿ ವೈಯಕ್ತಿಕ ಸಾಧನೆಗೂ ಒತ್ತುಕೊಡಲಾಗಿತ್ತು. ಸಹೋದರ ವೈದ್ಯ ಅವರು ಎಲ್ಲರನ್ನೂ ಸ್ವಾಗತಿಸಿದರು ಹಾಗೂ ಭೋದಕವರ್ಗದವರನ್ನು ಪರಿಚಯಿಸಿದರು. ಭಾಗವಹಿಸಿದವರನ್ನು 8 ಭಾಗಗಳಾಗಿ ವಿಂಗಡಿಸಲಾಗಿತ್ತು, ಪ್ರತಿಯೊಂದು ಗುಂಪಿನವರೂ ರಾಜಯೋಗದ ಒಂದೊಂದು ಅಂಗದ ಬಗ್ಗೆ ಮಾತನಾಡಬೇಕಾಗಿತ್ತು, ನಂತರ ಅವರ ಪರಿಚಯ ಮಾಡಿಕೊಳ್ಳಬೇಕಾಗಿತ್ತು. ಆ ದಿನದ ವಿಷಯಗಳೆಂದರೆ ಸ್ವಯಂಪ್ರಗತಿ, ಸಹಜಮಾರ್ಗ ಪಥ, ದೈನಂದಿನ ಸಾಧನೆ, ಪ್ರೇಮ, ಅನುಕಂಪ ಹಾಗೂ ಕರುಣೆ, ನಂಬಿಕೆ ಹಾಗೂ ಅಭ್ಯಾಸದ ಮೂಲಕ ಅಂತರ್ಯ ಶಕ್ತಿ, ಅಪೇಕ್ಷೆ ಮತ್ತು ಆಕಾಂಕ್ಷೆ, ಚಾರಿತ್ರ್ಯ ಮತ್ತು ಬದಲಾವಣೆ ಹಾಗೂ ಒತ್ತಡದ ನಿರ್ವಹಣೆ ಹೇಗೆ?

ಮರುದಿನದ ವಿಷಯಗಳು ಹೀಗಿದ್ದವು. ಸಮತೋಲನದ ಜೀವನ ಒಂದು ಕಲೆ, ಸಮಾಜದೆಡೆಗೆ ನಮ್ಮ ಜವಾಬ್ದಾರಿ, ಗುರುಗಳೊಂದಿಗೆ ನಮ್ಮ ಸಂಬಂಧವನ್ನು ಬೆಳೆಸಿಕೊಳ್ಳುವುದು ಹಾಗೂ ಪರಿಣಾಮಕಾರಿಯಾದ ಸಂವಹನ. ಭಾಗವಹಿಸಿದವರ ಒಂದು ಹೊಸ ಉತ್ಸಾಹದೊಂದಿಗೆ ಕಾರ್ಯಕ್ರಮವು ಮುಕ್ತಾಯಗೊಂಡಿತು.

ಶ್ರೀ ರಾಮಚಂದ್ರ ಮಿಷನ್®
ಎಕ್ರೋಸ್ ಇಂಡಿಯಾ ವಾರ್ತಾಪತ್ರ
ಜನವರಿ 2010 ಸಂಪುಟ 3 ಸಂಚಿಕೆ 1

# ಜ್ಯೋತಿ ಕೇಂದ್ರ

## ಅಲಹಾಬಾದ್ ಆಶ್ರಮ







1965ರಲ್ಲಿ ಅಲಹಾಬಾದ್ ಕೇಂದ್ರವು ಪ್ರಾರಂಭವಾಯಿತು ಹಾಗೂ ಶ್ರೀ ಎಂ.ಎಲ್.ಚತುರ್ವೇದಿಯವರನ್ನು ಪ್ರಶಿಕ್ಷಕ ಅಧಿಕಾರಿಗಳನ್ನಾಗಿ ನೇಮಿಸಲಾಯಿತು. ಅವರ ಮನೆಯಿಂದಲೇ ಪ್ರಾರಂಭವಾಗಿ ಭಾನುವಾರದ ಸತ್ಸಂಗವೂ ಸಹ 1994ರವರೆಗೆ ಅಲ್ಲಿಯೇ ನಡೆಯಿತು.

ಸ್ಥಳೀಯ ಅಭ್ಯಾಸಿಗಳಿಂದಲೇ ಸಂಗ್ರಹ ಮಾಡಿ ಅಲಹಾಬಾದ್‌ನ ಮುಂಡೇರಾದಲ್ಲಿ 13 ಎಕರೆ ಭೂಮಿಯನ್ನು ಸಂಸ್ಥೆಗೆ ದೇಣಿಗೆ ನೀಡಲಾಯಿತು. 1994 ಏಪ್ರಿಲ್ 14ರಂದು ಈ ಭೂಮಿಯು ನೋಂದಣಿಯಾಯಿತು. ಹಾಗೂ ಗುರುಗಳ ಆಶೀರ್ವಾದದಿಂದ 1994 ನವೆಂಬರ್ 13ರಂದು ಈ ಜಾಗದಲ್ಲಿ ಮೊದಲ ಸಾಮೂಹಿಕ ಸತ್ಸಂಗವು ನಡೆಯಿತು.



ಶ್ರೀ ಆರ್.ಆರ್.ಕೆ.ತ್ರಿವೇದಿಯವರ ಪ್ರಯತ್ನದ ಫಲವಾಗಿ ಉತ್ತರಪ್ರದೇಶದ ಆಗಿನ ಮಾನ್ಯ ರಾಜ್ಯಪಾಲರಾಗಿದ್ದ ಶ್ರೀ ಮೋತಿ ಲಾಲ್ ವೊಹ್ರಾರವರು 1996 ಫೆಬ್ರವರಿ 27ರಂದು ಧ್ಯಾನ ಮಂದಿರದ ನಿರ್ಮಾಣಕ್ಕಾಗಿ 10 ಲಕ್ಷ ಹಣವನ್ನು ಮಂಜೂರು ಮಾಡಿದರು. 1996 ಮಾರ್ಚ್ 9ರಂದು ಪೂಜ್ಯ ಗುರುಗಳ ಸಮ್ಮುಖದಲ್ಲಿ ಮಾನ್ಯ ರಾಜ್ಯಪಾಲರಿಂದ ಆಧಾರಶಿಲೆಯನ್ನು ನೆಡಿಸಲಾಯಿತು. ಗುರುಗಳು ತಮ್ಮ ಭಾಷಣದಲ್ಲಿ ಹಿಮಾಲಯದಲ್ಲಿ ವಾಸಿಸುತ್ತಿರುವ ಹಾಗೂ ತಪಸ್ಸು ಮಾಡುತ್ತಿರುವ ಋಷಿಗಳು ತಮ್ಮ ದೈವೀ ಪ್ರೇರಣಾ ಶಕ್ತಿಯ ಮೂಲಕ ಹೇಗೆ ಸಾಮಾನ್ಯ ಜನರ ಹೃದಯದೊಂದಿಗೆ ಸಂಪರ್ಕ ಮಾಡುತ್ತಿದ್ದರು ಎಂಬುದನ್ನು ತಿಳಿಸಿದರು. ಶ್ರೀ. ವೊಹ್ರಾರವರೂ ಸಹ ತಮ್ಮೊಂದಿಗೆ ಒಂದು ದೈವೀ ಯೋಜನೆಯನ್ನು ಹೊಂದಿದ್ದಾರೆ ಎಂದು ಉಲ್ಲೇಖಿಸಿದರು. ಪ್ರಭಾವಶಾಲಿ ಸ್ಥಾನದಲ್ಲಿರುವವರು ಅವರ ಬಲವನ್ನು ಜನರ ಸಮಾಜ ಕಲ್ಯಾಣಕ್ಕಷ್ಟೇ ಅಲ್ಲದೆ ಅವರ ಆಧ್ಯಾತ್ಮಿಕ ಏಳಿಗೆಗೋಸ್ಕರಕ್ಕಾಗಿಯೂ ಉಪಯೋಗಿಸಬೇಕೆಂದು ಗುರುಗಳು ಪ್ರೇರೇಪಿಸಿದರು. ಆನಂತರ ಧ್ಯಾನಮಂದಿರದ ನಿರ್ಮಾಣಕ್ಕೆಂದೇ ಇನ್ನೂ 3 ಧನಸಹಾಯಗಳನ್ನು ಮಂಜೂರು ಮಾಡಲಾಯಿತು.



1997 ನವೆಂಬರ್ 14ರಂದು ಪೂಜ್ಯ ಗುರುಗಳು ಧ್ಯಾನಮಂದಿರದ ಪ್ರಾರಂಭೋತ್ಸವವನ್ನು ಮಾಡಿದರು. ಇದು ನೆಲಮಹಡಿಯಲ್ಲಿದ್ದು 10,000 ಚದುರ ಅಡಿ ಇದ್ದು 2000 ಚದುರ ಅಡಿ ಅಳತೆಯ ಎರಡು ಬಾಲ್ಕನಿಗಳನ್ನು ಹೊಂದಿದೆ. ಗುರುಗಳು ತಮ್ಮ ಭಾಷಣದಲ್ಲಿ ಈ ಕೇಂದ್ರವು ಆಶ್ರಮವನ್ನು ಹೊಂದುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದು ಹೇಳಿದರು. ಎಲ್ಲರೂ ತಮ್ಮ ಹೃದಯವನ್ನಿಟ್ಟು ಕೆಲಸ ಮಾಡಿದುದರ ಪರಿಣಾಮವಾಗಿ ನಿರ್ಮಾಣದ ಕಾರ್ಯವು ಬಹಳ ವೇಗದಲ್ಲಿದ್ದದ್ದನ್ನೂ ಕಂಡು ಎಲ್ಲರೂ ಬೆರಗಾದರು. ನಮ್ಮ ಸಂಸ್ಥೆಯಲ್ಲಿರುವ ಯುವಜನ ನಮ್ಮ ಸೇನೆ, ನಮ್ಮ ಬಲವಿದ್ದಂತೆ ಹಾಗೂ ಹಿರಿಯರಲ್ಲಿ ಕೊರತೆ ಇರುವ ಒಂದು ರೀತಿಯ ಉತ್ಸಾಹವು ಅವರಲ್ಲಿ ಇದೆ ಎಂದು ಗುರುಗಳು ಹೇಳಿದರು.



ಸಹೋದರ ಯು. ಎಸ್. ಬಾಜಪೇಯಿಯವರಿಂದ ಮುಂದುವರೆದ ಪ್ರಯತ್ನದಿಂದ ಉ.ಪ್ರ. ಸರ್ಕಾರದಿಂದ ಗುರುಗಳ ಕಾಟೇಜ್, ಗ್ರಂಥಾಲಯ, ಓದುವ ಕೊಠಡಿ, ಪಾಕಶಾಲೆ, ಭೋಜನ ಮಂದಿರ, ಶಯನಗೃಹ, ಶೌಚಾಲಯದ ಬ್ಲಾಕ್ ಹಾಗೂ ರಸ್ತೆ ಇವೆಲ್ಲದರ ನಿರ್ಮಾಣಕ್ಕಾಗಿ ಉಳಿದ ಧನಸಹಾಯವು ಮಂಜೂರಾಯಿತು. ಹೀಗೆ ಅಲಹಾಬಾದ್‌ನ ಆಶ್ರಮಕ್ಕಾಗಿ ಖರ್ಚಾದ ಒಟ್ಟು ಸುಮಾರು 80ಲಕ್ಷ ಹಣವು ಸರ್ಕಾರದಿಂದ ನೀಡಲ್ಪಟ್ಟಿತು. ಹೀಗೆ ಸರ್ಕಾರದಿಂದ ಗಣನೀಯವಾದ ಮೊತ್ತವನ್ನು ಪಡೆದ ದೇಶದ ಮೊದಲ ಅಶ್ರಮವಿದು. ಗುರುಗಳ ಕಾಟೇಜಿನ ಬಳಿ ಸರಿಯದ ನಿರ್ವಹಣೆಯಲ್ಲಿರುವ ಬಗೆ ಬಗೆಯ ಫಲಭರಿತ ಮರಗಳು ಹಾಗೂ ಹೂ ಬಿಡುವ ಸಸ್ಯಗಳಿಂದ ತುಂಬಿದ ಉದ್ಯಾನವಿದೆ.



ಅಕ್ಕ–ಪಕ್ಕದ ಪ್ರದೇಶಗಳ ಹೆಚ್ಚಿನ ಸಂಖ್ಯೆಯ ಬಡಜನ ಹಾಗೂ ಅವಶ್ಯಕತೆಯಿರುವ ರೋಗಪೀಡಿತರನ್ನು ಸೇವೆಗೈಯಲೆಂದು ಎಲ್ಲಾ ಸೌಲಭ್ಯವಿರುವ ಒಂದು ಆರೋಗ್ಯ ಕೇಂದ್ರವೂ ಸಹ ಇದೆ.

ಸರಿಸುಮಾರು 400 ಅಭ್ಯಾಸಿಗಳು ಭಾನುವಾರದ ಸತ್ಸಂಗದಲ್ಲಿ ಭಾಗವಹಿಸುತ್ತಾರೆ. ಇಲ್ಲಿ ಪ್ರತಿದಿನ ಬೆಳಗ್ಗೆ ಮತ್ತು ಸಾಯಂಕಾಲ ಸತ್ಸಂಗವು ಜರುಗುತ್ತದೆ. ಆಶ್ರಮದಲ್ಲಿ ಅನೇಕ ತರಬೇತಿ ಕಾರ್ಯಕ್ರಮಗಳು ನಿಯಮಿತವಾಗಿ ನಡೆಯುತ್ತಿರುತ್ತವೆ.

**To download or subscribe to this newsletter, please visit http://www.sahajmarg.org/newsletter/india For feedback, suggestions and news articles please send email to in.newsletter@srcm.org**
© 2009 Shri Ram Chandra Mission ("SRCM"). All rights reserved. "Shri Ram Chandra Mission", "Sahaj Marg", "SRCM", "Constant Remembrance" and the Mission's Emblem are registered Trademarks of Shri Ram Chandra Mission.This Newsletter is intended exclusively for the members of SRCM. The views expressed in the various articles are provided by various volunteers and are not necessarily those of SRCM.